# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ - 2016



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 33**

**ಸಂಚಿಕೆ - 6**

**ಮಾರ್ಚ್ - 2016**

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಸಂಪಾದಕರಿಗೊಂದು... | **ಶ್ರೀನಿವಾಸ ವೈದ್ಯ** | 7 |
| ಆರಾಧಕ | **ಪ್ರಕಾಶ್** | 8 |
| ಬಸ್ ಧಾರಾವಾಹಿ | **ಸಹನಾ ಪ್ರಸಾದ್** | 10 |
| ಸುಸ್ತಾದರು | **ಹಾ.ಮ್ಯೆ. ಸೂರಿ** | 12 |
| ದುಬಾಯ್ ಗೋಲ್ಡ್! | **ಸಿ.ಆರ್. ಸತ್ಯ** | 13 |
| ಕನ್ನಡ ಟಿವಿ.... | **ವೈ.ಎನ್. ಗುಂಡೂರಾವ್** | 16 |
| ತುಂತುರು | **ದಂನಳ** | 22 |
| ಒಳನೋಟದ ಗುರುತು | **ಬೇಲೂರು ರಾಮಮೂರ್ತಿ** | 23 |
| ಹೊಸ ಬಿಸಿ | **ವಸುಮತಿ ಉಡುಪ** | 26 |
| ಪ್ರೇಮಾಯಣ | **ಎಚ್.ಆರ್. ಹನುಮಂತ ರಾವ್** | 29 |
| ವಸ್ತ್ರ ಮುಚ್ಚಿದ ಗುರುತು | **ಎಂ.ಕೆ. ಭಾಸ್ಕರ ರಾವ್** | 37 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ದೇಶದ ಚರಿತ್ರೆ ತಿರುಚಲಾಗುತ್ತಿದೆ – ಹೇಳಿಕೆ

*● ಪರವಾಗಿಲ್ಲ ಬಿಡಿ, ಹೇಗೂ ಮರುಕಳಿಸುತ್ತಲ್ಲ !!*

★★★

ವಿಡಿಯೋನಲ್ಲಿ ಉಗ್ರ ಹೆಡ್ಲಿ ಸಂಭಾಷಣೆ – ಸುದ್ದಿ

*● ಕಲಿಯುಗದ ಅಜ್ಞಾತವಾಸ !!*

★★★

ಬೆಲೆ ವ್ಯತ್ಯಾಸದ ದತ್ತಾಂಶ ಸೇವೆಗೆ ಟ್ರಾಯ್ ನಿಷೇಧ – ಪತ್ರಿಕೆ

*● ಅಂಗ್ರಂದ್ರೇನ್ ಸಾ ?!*

★★★

'ನ್ಯಾನೋ ತಂತ್ರಜ್ಞಾನದಿಂದ ಶುದ್ಧ ಕುಡಿಯುವ ನೀರು' – ಶೀರ್ಷಿಕೆ

*● ಕಾವೇರಿ ನಡುಗಿದಳಂತೆ !!*

★★★

ಸುಸ್ಥಿತಿಯಲ್ಲಿರುವ ರಸ್ತೆಗೆ ಮತ್ತೆ ಟಾರು ಹಾಕುವ ಯತ್ನ – ಸುದ್ದಿ

*● ಲಂಚದ ತಾಂಡವ ನೃತ್ಯ !?*

★★★

ಮಾವ – ಅಳಿಯನ ಹಣಾ ಹಣಿ – ಪತ್ರಿಕೆ

*● ಹೆದರಬೇಡಿ, ಚುನಾವಣೆ ಸುದ್ದಿ ಅಷ್ಟೆ !!*

★★★

ಶಾಲೆಗೆ ನುಗ್ಗಿದ ಚಿರತೆ – ಸುದ್ದಿ

*● 'ವನ್ಯಜೀವಿ ಸಪ್ತಾಹ' ಅಂತ ಓದಿತ್ತೇನೋ ?!*

★★★

ಸಂವಿಧಾನದ ಪವಿತ್ರತೆ ಕಾಪಾಡಿ – ಪ್ರಣವ್ ಮುಖರ್ಜಿ


*● 'ಅರಣ್ಯ ರೋದನ' ಎಂದರೆ ಇದೇ ಇರಬೇಕು !!*

★★★

## ನಮ್ಮ ನಿಮ್ಮಲ್ಲಿ

**ಕ**ಳೆದ ಚುನಾವಣೆಯಲ್ಲಿ ನಮ್ಮ ನಾಡಿನ ಜನತೆ ಮೋದಿಯನ್ನ ಪ್ರಧಾನಿ ಗದ್ದುಗೆಗೆ ತಂದಮೇಲೆ ದೇಶ ಸರ್ವತೋಮುಖವಾಗಿ ಉದ್ಧಾರ ಆಗುತ್ತೆ ಅಂತ ನಾನು ಎಣಿಸಿದ್ದೆ. ಆದರೆ ಹೆಜ್ಜೆ ಹೆಜ್ಜೆಗೂ ಅಡ್ಡಬರುವ ನಮ್ಮ ವಿರೋಧ ಪಕ್ಷಗಳ ನಡವಳಿಕೆ, ಸುದ್ದಿ ಬಿತ್ತರಿಸುವ ನ್ಯಾಷನಲ್ ಚಾನೆಲ್ಲುಗಳ ಆ್ಯಂಕರ್‌ಗಳ ದೇಶಭಕ್ತಿಹೀನತೆ ಇವನ್ನೆಲ್ಲಾ ನೋಡಿ ರೋಸಿಹೋಗಿ ಇತ್ತೀಚೆಗೆ ನಾನು ನ್ಯೂಸ್ ನೋಡುವುದನ್ನೇ ಬಿಟ್ಟುಬಿಟ್ಟಿದ್ದೇನೆ. ನನ್ನ ಮೊಮ್ಮಗಳು ಬಂದಾಗ ನೋಡಲೇಬೇಕಾದ ಛೋಟಾ ಭೀಮ್ ಕಾರ್ಯಕ್ರಮವನ್ನು ಈ ದಿನಗಳಲ್ಲಿ ನೋಡಿದಾಗಲೂ ಅದು ಮನಸ್ಸಿಗೆ ಎಷ್ಟೋ ತಂಪನ್ನು ತರುತ್ತಿದೆ. ಹಾಗಾಗಿ ಅದೊಂದೇ ನಾನು ನೋಡುವ ಟಿವಿ ಕಾರ್ಯಕ್ರಮ! ಪರಿಸ್ಥಿತಿ ಹೀಗಿರುವಾಗ ಮನಸ್ಸಿಗೆ ಕೌತುಕ, ಅಚ್ಚರಿ, ಉತ್ಸಾಹ ಎಲ್ಲವನ್ನು ಒಟ್ಟಿಗೇ ತಂದ ಒಂದು ಸುದ್ದಿ ಅಂದರೆ ಐನ್‌ಸ್ಟೈನ್ ಪ್ರತಿಪಾದಿಸಿದ್ದ ಗುರುತ್ವ ತರಂಗಗಳ ಇರುವಿಕೆಯನ್ನು ಸಿದ್ಧೀಕರಿಸಿದ ಪ್ರಯೋಗ. ದೂರದ ಆಳ ಆಕಾಶದಲ್ಲಿ ಎರಡು ದೈತ್ಯ ತೂಕದ ಕಪ್ಪು ರಂಧ್ರಗಳು, ಇಬ್ಬರು ಹುಡುಗಿಯರು (ನಮ್ಮ ಕಾಲದಲ್ಲಿ) ಪರಸ್ಪರ ಕೈ ಜೋಡಿಸಿ ಅಪ್ಪಾಲೆ ತಿಪ್ಪಾಲೆ ತಿರುಗುವ ಹಾಗೆ ಒಂದರ ಸುತ್ತ ಇನೊಂದು ತಿರುಗುತ್ತಾ ಮಿಲನ ನರ್ತನ ಮಾಡಿ ಹಲವೇ ಸೆಕೆಂಡುಗಳಲ್ಲಿ ಒಂದುಗೂಡಿದ ಘಟನೆಯಿಂದ ಉದ್ಭವವಾದ ತರಂಗಗಳು ಒಂದೂಕಾಲು ಕೋಟಿ ವರ್ಷಗಳು ಆಕಾಶದಲ್ಲಿ ಹಾದು ಕಳೆದ ಸೆಪ್ಟೆಂಬರ್ ಹದಿನಾಲ್ಕರಂದು ಬೆಳಗ್ಗೆ ಲೈಗೋ (LIGO) ಅಂದರೆ ಲೇಸರ್ ಇಂಟರ್ ಫೆರೋಮೀಟರ್ ಗ್ರಾವಿಟೇಷನಲ್ ವೇವ್ ಅಬ್ಸರ್‌ವೇಟರಿ ಎಂಬ ಒಂದು ಉಪಕರಣದಲ್ಲಿ ಆ ಅಲೆಗಳು ದಾಖಲಿಸಿದ್ದನ್ನು ಅಮೆರಿಕೆಯ ಖಭೌತ ವಿಜ್ಞಾನಿಗಳು ಗುರುತಿಸಿದರಂತೆ. ಅನಂತರದ ತಿಂಗಳುಗಳಲ್ಲಿ ನಿಜವಾಗಿ ಅವು ಗುರುತ್ವ ತರಂಗಗಳೇ ಎಂಬುದನ್ನು ಖಾತರಿಪಡಿಸಿಕೊಂಡ ನಂತರ ವಿಜ್ಞಾನಿಗಳು ಒಂದು ವಾರ್ತಾಗೋಷ್ಠಿಯನ್ನು ಕರೆದು ಈ ಸುಸುದ್ದಿಯನ್ನು ಹಂಚಿಕೊಂಡದ್ದನ್ನು ನೀವು ಪತ್ರಿಕೆಗಳಲ್ಲಿ ಓದಿರಬಹುದು. ಜಗತ್ತಿನ ಸೃಷ್ಟಿ ಮತ್ತು ಕಾರ್ಯವಿಧಾನಗಳ ಬಗ್ಗೆ ಅನೇಕ ಸಮೀಕರಣಗಳನ್ನು ಐನ್‌ಸ್ಟೈನ್ ತನ್ನ ಪ್ರತಿಭೆಯಿಂದ ಪ್ರತಿಪಾದಿಸಿದ. ಅವುಗಳಲ್ಲಿ ಈ ಗುರುತ್ವ ತರಂಗಗಳ ಅಸ್ತಿತ್ವ ಮತ್ತು ಈ ತರಂಗಗಳು ದೇಶಕಾಲವೆಂಬ ಒಂದು ಮಾಧ್ಯಮದಲ್ಲಿ (Space time Continuum) ಪಸರಿಸುವ ಸಾಧ್ಯತೆಯನ್ನು ಸೂಚಿಸುವ ಸಮೀಕರಣಗಳೂ ಇವೆ. ಮೊನ್ನಿನ ಈ ಪ್ರಯೋಗ ಐನ್‌ಸ್ಟೈನ್‌ನ ಪ್ರತಿಪಾದನೆಯನ್ನು ಧೃಡೀಕರಿಸಿದ್ದು ಈ ಪ್ರಯೋಗದ ಮಹತ್ವದ ಒಂದು ಸಣ್ಣಭಾಗ ಮಾತ್ರ.

ಹಾಗಾದರೆ ಈ ಸುದ್ದಿಯ ಹಿರಿಮೆಯಾದರೂ ಏನು ಎಂದು ನೀವು ಕೇಳಬಹುದು. ಇದಕ್ಕೆ ಉತ್ತರವನ್ನು ಎರಡು ಭಾಗಗಳಲ್ಲಿ ಹೇಳುತ್ತೇನೆ. ನಾನೂರು ವರ್ಷಗಳ ಹಿಂದೆ ಗೆಲಿಲಿಯೋ ತನ್ನ ದೂರದರ್ಶಕವನ್ನು ಕಂಡುಹಿಡಿದು ಗುರುಗ್ರಹದ ಚಂದ್ರರನ್ನು ನೋಡಿದಾಗ, ಮಾನವ ಕುಲಕ್ಕೆ ಜಗತ್ತನ್ನು ನೋಡಿ ತಿಳಿಯಲು ಒಂದು ಹೊಸ ಉಪಕರಣ



ಹಾಗೂ ವಿಧಾನ ದೊರಕಿತು. ದೂರದ ಆಕಾಶಕಾಯಗಳಿಂದ ಹೊರಹೊಮ್ಮುವ ಕ್ಷೀಣ ಬೆಳಕನ್ನು ಅನೇಕ ಪಟ್ಟುಗ್ಗಳಷ್ಟು ಉದ್ಧರಿಸಿ ಅವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅವಕಾಶವನ್ನು ಗೆಲಿಲಿಯೋ ನಮಗೆ ದೊರಕಿಸಿದ ನಂತರ ಖಗೋಳ ಶಾಸ್ತ್ರದ ಪ್ರಗತಿ ನಾಗಾಲೋಟದಲ್ಲಿ ಸಾಗಿತು. ಆದರೆ ಇಲ್ಲಿನವರೆಗೆ ಖಗೋಳ ಶಾಸ್ತ್ರಜ್ಞರು ಬೆಳಕಿನ ಕಿರಣ, ರೇಡಿಯೋ ಅಲೆಗಳು ಮತ್ತು ಎಕ್ಸ್‌ರೇಗಳ ಸಹಾಯದಿಂದ ಮಾತ್ರ ಜಗತ್ತನ್ನು ಅರಿಯುವುದು ಸಾಧ್ಯವಾಗಿತ್ತು. ಈ ಲೈಗೋ ಉಪಕರಣ ಗುರುತ್ವ ತರಂಗಗಳ ಮೂಲಕ ಜಗತ್ತನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವ ಅವಕಾಶವನ್ನು ಕಲ್ಪಿಸಿದೆ. ಗುರುತ್ವ ತರಂಗಗಳು ಬೆಳಕಿನ ಕಿರಣಗಳ ಹುಟ್ಟಿಗೂ ಮುಂಚಿನಿಂದ ಇರುವುದರಿಂದ ಇವುಗಳ ಮೂಲಕ ನಾವು ತಿಳಿಯಬಲ್ಲ ಜಗತ್ತಿನ ಮಾಹಿತಿ ಇನ್ನೂ ಪ್ರಾಚೀನ ಕಾಲದ್ದಾಗಿರಬಲ್ಲುದು. ಮಹಾಸ್ಫೋಟದ ಆಸುಪಾಸಿನ ಹಲವು ಮಿಲಿಯನ್ ವರ್ಷಗಳ ವಿದ್ಯಮಾನಗಳನ್ನು ತಿಳಿಯುವಂತಾದರೆ ನಮ್ಮ ಜ್ಞಾನಭಂಡಾರದ ಎಲ್ಲೆಗಳು ಎಷ್ಟು ವಿಸ್ತಾರವಾಗಬಲ್ಲುದೆಂಬುದನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ.

ಈ ಸುದ್ದಿಯ ಹಿರಿಮೆಯ ಇನ್ನೊಂದು ಆಯಾಮವೆಂದರೆ ಜಗತ್ತಿನ ಸೃಷ್ಟಿಯ ಬಗ್ಗೆ ಅದು ಬಗೆಹರಿಸಿರುವ ಸಂಶಯಗಳು. ನಮ್ಮ ವೇದಾಂತಗಳಲ್ಲಿ ಉಲ್ಲೇಖವಾಗಿರುವ ಜಗತ್ತಿನ ಸೃಷ್ಟಿಯ ಮಜಲುಗಳಲ್ಲಿ ಪಂಚಭೂತಗಳ ಸೃಷ್ಟಿಯೂ ಒಂದು. ಚಿಕ್ಕಂದಿನಿಂದ ನನಗೆ ಪಂಚಭೂತಗಳಲ್ಲಿ ಒಂದಾದ ಆಕಾಶದ ಬಗ್ಗೆ ತೀರ ಅಸ್ಪಷ್ಟವಾದ ಕಲ್ಪನೆಯಿತ್ತು. ಪಂಚಭೂತಗಳೆಂದರೆ ವಸ್ತುವಿನ ಐದು ರೂಪಗಳು. ಐದು ವಸ್ತುಗಳೆಂದಮೇಲೆ ಆಕಾಶವೂ ಒಂದು ವಸ್ತುವೇ ಎಂದಂತಾಯಿತು. ಭೂಮಿ, ವಾಯು, ಅಗ್ನಿ ಮತ್ತು ಜಲ ಇವುಗಳನ್ನು ನಾವು ಮುಟ್ಟಿನೋಡಿ ಅವು ವಸ್ತುಗಳೆಂದು ಖಾತರಿಪಡಿಸಿಕೊಳ್ಳಬಹುದು. ಆದರೆ ಏನೂ ಇಲ್ಲದ ಖಾಲಿ ಇರುವ ಜಾಗವನ್ನೇ ಆಕಾಶ ಅಥವಾ space ಎಂದು ಹೆಸರಿಸಿರುವಾಗ ಏನೂ ಇಲ್ಲದಿರುವ empty space, ವಸ್ತು ಹೇಗಾದೀತು ಎಂಬುದೇ ನನ್ನ ಸಂಶಯ. ಆಕಾಶ ಎಂಬುದು ಕೇವಲ ಖಾಲಿ ಜಾಗವಲ್ಲ, ಅದು ದೇಶಕಾಲವೆಂಬ ಒಂದು ಅತ್ಯಂತ

ಸೂಕ್ಷ್ಮಾತಿಸೂಕ್ಷ್ಮವಾದ ಪರದೆ (the Fabric of space time continuum) ಎಂಬ ಐನ್‌ಸ್ಟೈನನ ಪ್ರತಿಪಾದನೆ ಇಲ್ಲಿನವರೆಗೆ ಕೇವಲ ಪ್ರತಿಪಾದನೆಯಾಗಿತ್ತು. ಈಗ ಸ್ಪೇಸ್ ಸಹಾ ಒಂದು ವಸ್ತು ಎಂಬ ಸತ್ಯ ಧೃಢೀಕೃತವಾದಂತೆ ವೇದಾಂತದ ಉಲ್ಲೇಖ ಸ್ಪಷ್ಟವಾಗುವುದರ ಜೊತೆಗೆ ವೇದಗಳ ಕಾಲದ ದಾರ್ಶನಿಕರ ಒಳನೋಟಗಳಿಂದ (insights) ನಾನು ನಿಜಕ್ಕೂ ಮೂಕವಿಸ್ಮಿತನಾಗುವಂತಾಯಿತು.

ಇನ್ನೊಂದು ವಿಷಯ. ಲೈಗೋದಲ್ಲಿ ದಾಖಲಾಗಿರುವ ಈ ಗುರುತ್ವ ತರಂಗಗಳ ತರಂಗಾಂತರ ನಮ್ಮ ಕಿವಿಗೆ ಕೇಳುವ ಶಬ್ದಗಳ ತರಂಗಾಂತರದಲ್ಲಿ ಬರುತ್ತವಂತೆ. ಯೂಟ್ಯೂಬಿನಲ್ಲಿ ಆ ಶಬ್ದಗಳನ್ನು ಕೇಳಿಸಿಕೊಳ್ಳಲು ಅನುವಾಗುವ ಕ್ಲಿಪ್ ಒಂದು ಇದೆ. ಒಂದೂಕಾಲು ಕೋಟಿವರ್ಷಗಳ ಹಿಂದೆ ಜಗತ್ತಿನ ಅಂತರಾಳದಲ್ಲಿ ಉಂಟಾದ ಗುಡುಗನ್ನು ಅದರಲ್ಲಿ ಕೇಳಿಸಿಕೊಂಡಾಗ ಮೈ ಜುಮ್ಮೆಂದಿತು. ಇನ್ನು ಮುಂದೆ ಭವಿಷ್ಯದಲ್ಲಿ ಮಾನವ ಮಹಾಸ್ಫೋಟದ ಶಬ್ದವನ್ನೇ ದಾಖಲಿಸಬಹುದೇನೋ? ಹಾಗೇನಾದರೂ ದಾಖಲಿಸುವಂತಾದರೆ, ಅದೇನಿರಬಹುದೆಂದು ತಿಳಿಯಲು ನಾನೇನೂ ಅಲ್ಲಿನವರೆಗೆ ಜೀವಿಸಿರಬೇಕಾಗಿಲ್ಲ. ಅದು ಓಂಕಾರವಾಗಿರುತ್ತೆಂಬುದು ನನಗಂತೂ ಖಚಿತ!

**ಶಿವಕುಮಾರ್**

---

## ಪದ್ಯಗಳು

ಮಾನ್ಯ ಗೆಳೆಯ ಶರಣಪ್ಪನವರು ಕವಿಯಲ್ಲದಿದ್ದರೂ, ಕವನ ಪ್ರಿಯರು. ಇವರು ಹಲವಾರು ವರ್ಷಗಳಿಂದ ಪ್ರಾಥಮಿಕ ಶಾಲೆಯ ಕನ್ನಡ ಪಠ್ಯಪುಸ್ತಕಗಳಿಂದ ಬಹು ಆಸಕ್ತಿವಹಿಸಿ ಸಂಗ್ರಹಿಸಿರುವ ಆಯ್ದ ಪದ್ಯಗಳ ಸಂಗ್ರಹ ಈ ಪುಸ್ತಕ. ನಲವತ್ತರ, ಐವತ್ತರ ದಶಕಗಳಲ್ಲಿ ಕನ್ನಡಶಾಲೆಗಳಲ್ಲಿ ಓದಿದ ಯಾರಿಗಾದರೂ ಈ ಪದ್ಯಗಳು ಈ ಬಾಲ್ಯದ ಸಿಹಿ ದಿನಗಳು ನೆನಪಾಗುವುದು ಖಂಡಿತ. ಆಗಿನ ದಿನಗಳಲ್ಲಿ ರಾಜ್ಯಗೀತೆಯಾಗಿದ್ದ ಕಾಯೌ ಶ್ರೀಗೌರಿಯ ಸಾಲುಗಳಾಗಿದ್ದ, ವೈಮಾನಿಕ ಭಾಮಾರ್ಚಿತ ಕೋಮಲತರಪಾದೆ । ಸೀಮಾತಿಗೆ ಭೂಮಾಸ್ಪದೆ ಕಾಮಿತ ಫಲದೆ, ಕಾಯೌ ಶ್ರೀಗೌರಿ, ಕರುಣಾಲಹರಿ, ತೋಯೇಜಾಕ್ಷಿ, ಶಂಕರೀಶ್ವರಿ ಈ ಸಾಲುಗಳಾಗಲೀ ಅಥವಾ ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ, ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮ ದಾತೆಯೇ ಪದ್ಯವಾಗಲೀ ಓದುಗರ ಮನವನ್ನು ಮುದದಿಂದ ತುಂಬುವುದರಲ್ಲಿ ಯಶಸ್ವಿಯಾಗುತ್ತವೆ.

ನೂರಾ ಎಂಭತ್ತಾರು ಪದ್ಯಗಳಿರುವ ಈ ಅಮೂಲ್ಯ ಪುಸ್ತಕ ಖಂಡಿತವಾಗಿ ಸಂಗ್ರಾಹ್ಯ ಯೋಗ್ಯ. ಏಪ್ರಿಲ್ ಐದರಂದು ಸಂಜೆ ಅಪರಂಜಿ ಸಮಾರಂಭದಲ್ಲಿ (ವಿವರಗಳಿಗೆ ಮುಂದಿನ ಪುಟ ನೋಡಿ) ಬಿಡುಗಡೆಯಾಗಲಿದೆ. ಅಗತ್ಯವಾಗಿ ಸಮಾರಂಭದಲ್ಲಿ ಭಾಗವಹಿಸಿ ಈ ಪುಸ್ತಕವನ್ನು ರಿಯಾಯಿತಿ ದರದಲ್ಲಿ ಕೊಳ್ಳಬಹುದು.

*ಶಿವಕುಮಾರ್*

# ಕೊರವಂಜಿ ಅಪರಂಜಿ ಟ್ರಸ್ಟ್

ಮಲ್ಲೇಶ್ವರಂ – ಬೆಂಗಳೂರು

## ಅಪರಂಜಿ ಮಾಸಪತ್ರಿಕೆಯ 34ರ ಹಬ್ಬ

| | | |
|---|---|---|
| ಉದ್ಘಾಟನೆ ಮತ್ತು ವಿಶೇಷಾಂಕ ಬಿಡುಗಡೆ | ~ | ಡಾ. ನರಹಳ್ಳಿ ಬಾಲಸುಬ್ರಮಣ್ಯ |
| ಮುಖ್ಯ ಅತಿಥಿ | ~ | ಶ್ರೀ ಶ್ರೀನಿವಾಸ ವೈದ್ಯ |
| ಅಧ್ಯಕ್ಷತೆ | ~ | ಶ್ರೀ ಎನ್. ರಾಮಾನುಜ |
| ಅಪರಂಜಿ ಓದುಗರೊಂದಿಗೆ ಮುಕ್ತ ಸಂವಾದ | ~ | ಶ್ರೀ ವೈ. ವಿ. ಗುಂಡೂರಾವ್ |
| ನಗೆ ನಾಟಕ | ~ | ಡಾ. ಬಿ.ವಿ. ರಾಜಾರಾಂ (ಕಲಾ ಗಂಗೋತ್ರಿ ತಂಡ) |

ಮಂಗಳವಾರ – 5.4.2016 – ಸಂಜೆ 5 ಗಂಟೆಗೆ

ಭಾರತೀಯ ವಿದ್ಯಾ ಭವನ
ರೇಸ್ ಕೋರ್ಸ್ ರಸ್ತೆ, ಬೆಂಗಳೂರು

## ತಮಗೆಲ್ಲಾ ಪ್ರೀತಿಪೂರ್ವಕ ಸ್ವಾಗತ

# ಸಂಪಾದಕರಿಗೊಂದು ಪತ್ರ

**ಮಾ**ನ್ಯ ಸಂಪಾದಕರಲ್ಲಿ,

ಮಾನ್ಯರೇ,

ಕಳೆದ ತಿಂಗಳು ನಮ್ಮ ಮನೆಗೆ ಹಿರಿಯರೊಬ್ಬರು ಬಂದಾಗ ಅವರ ಕಣ್ಣಿಗೆ ನಿಮ್ಮ ಜನವರಿ ತಿಂಗಳ 'ಸಿನಿಮಾ ವಿಶೇಷಾಂಕ' ಬಿತ್ತು. ಆಗ ಅವರು ನಾಸ್ತಾಲ್ಜಿತರಾಗುತ್ತಾ ಆಡಿದ ಕೆಲವು ಮಾತುಗಳನ್ನ ಇಲ್ಲಿ ಉಲ್ಲೇಖಿಸಬಯಸುವೆ.

'ವಾ ಲಾಹೋರ್! ಸುಮಾರು 1948 ಅಥವಾ 49 ರ ಮೇ ತಿಂಗಳಿನ ಯಾವದೋ ಒಂದು ಮಧ್ಯಾಹ ಧಾರವಾಡದ ಅಕ್ಕಿಪೇಟೆಯ ಬಳಿಯಿದ್ದ 'ವಿಜಯ' ಟಾಕೀಸಿನಲ್ಲಿ ನಾನೂ 'ಲಾಹೋರ್' ಚಿತ್ರ ನೋಡಿದ್ದೆ. ನರ್ಗಿಸ್, ಕರಣದಿವಾನ, ಯಾಕೂಬ, ಓಂಪ್ರಕಾಶ್ ಮುಂತಾದವರು ನಟಿಸಿದ್ದರು. ನರ್ಗಿಸ್ ತುಂಬ ಸುಂದರಿ, ಅಷ್ಟೇ ಗಂಭೀರೆ. ಕರಣದಿವಾನ ಪಾತ್ರವಹಿಸಿದ್ದ ಚಿತ್ರಗಳೆಲ್ಲವೂ ಸಿಲ್ವರ್ ಜುಬಿಲಿ ಕಾಣುತ್ತವೆ ಎಂದು ನಂಬಿದ್ದ ಕಾಲವದು. ಉದಾ: ರತನ್, ಬಹಾರ್, ಶೀಷ್ ಮಹಲ್ ಇತ್ಯಾದಿ.

ದೇಶ ವಿಭಜನೆಯ ಹಿಂಸಾಕಾಂಡದಿಂದ ಆದೇತಾನೇ ಹೊರಬರಲು ಒದ್ದಾಡುತ್ತಿದ್ದ ದಿನಗಳವು. ಲಾಹೋರ್ ಚಿತ್ರಕೂಡ ಆ ಕಾಲಕ್ಕೆ ನಡೆದ ಹಿಂಸೆಯ ಹಿನ್ನೆಲೆಯಲ್ಲಿ ಮೂಡಿದ ಚಿತ್ರ. ಚಿತ್ರದಲ್ಲಿ ನರ್ಗಿಸ್, ಕರಣದಿವಾನ ವಿರುದ್ಧ ಕೋಮಿಗೆ ಸೇರಿದ ಪ್ರೇಮಿಗಳಾಗಿರುತ್ತಾರೆ. ಡಾಕುಗಳು ನರ್ಗಿಸಳನು ಅಪಹರಿಸಿ ಒಂದು ಮಹಡಿಯ ಮನೆಯಲ್ಲಿ ಕೂಡಿಹಾಕುತ್ತಾರೆ. ಕರಣದಿವಾನ ವೇಷ ಮರೆಸಿಕೊಂಡು ತಳ್ಳುಗಾಡಿಯ ತರಕಾರಿ ಮಾರುವವನಾಗಿ, ''ಆಲೂ......ಮಟರ್...ಲೀಲೂ'' ಎಂದು ಕೂಗು ಹಾಕುತ್ತಾ ಬೀದಿ ಬೀದಿ ಅಲೆಯುತ್ತಾ ತನ ಪ್ರೇಯಸಿ ನರ್ಗಿಸಳನ್ನು ಹುಡುಕುತ್ತಿರುತ್ತಾನೆ. ಆಲೂ ಮಟರ್‌ಗಳು ತರಕಾರಿಗಳ ಹೆಸರಾದರೆ, 'ಲೀಲೂ' ಎಂಬುದು ನರ್ಗಿಸಳ ಹೆಸರಾಗಿರುತ್ತದೆ. ಕೊನೆಗೆ ಒಂದು ದಿನ ಮಹಡಿ ಮನೆಯ ಮಹಡಿ ಕಿಟಿಕಿಯಿಂದ ಈ 'ಲೀಲೂ' ಕೂಗನ್ನು ಕೇಳಿ ನರ್ಗಿಸ್ ಧಾವಿಸಿ ಕಿಟಕಿಗೆ ಬಂದು ಬೀದಿಯಲ್ಲಿ ತನ ಪ್ರೇಮಿಯನ್ನು ನೋಡುತ್ತಾಳೆ. ಮುಂದೇನಾಗುತ್ತದೋ ನೆನಪಿಲ್ಲ.

ಈ ಚಿತ್ರದಲ್ಲಿ ಒಳ್ಳೊಳ್ಳೆಯ ಹಾಡುಗಳಿದ್ದ ನೆನಪು.

ದೇಶ ವಿಭಜನೆಯಾದಾಗ ಪಂಜಾಬ ಪ್ರಾಂತದ ಲಾಹೋರ್ ಪಾಕಿಸ್ತಾನಕ್ಕೆ ಸೇರಿತು. ಆಗ ದಯಾನಂದ ಸರಸ್ವತಿಯವರು ಸ್ಥಾಪಿಸಿದ ಅಲ್ಲಿನ 'ಆರ್ಯಸಮಾಜ' ದ ಎಲ್ಲ ಆಸ್ತಿಪಾಸ್ತಿಗಳು, ಪಾಠಶಾಲೆಗಳು, ಕಾಲೇಜು, ಪ್ರಚಾರ ಕೇಂದ್ರಗಳು, ಹಿಂದು ಧರ್ಮದ ಅಲಭ್ಯ ಗ್ರಂಥಗಳು, ಎಲ್ಲ ಎಲ್ಲ ಹಿಂಸೆಗೆ ಆಹುತಿಯಾಗಿ ಸುಟ್ಟು ಭಸ್ಮವಾದದ್ದು ಈಗ ಇತಿಹಾಸ. 'ಲಾಹೋರ್' ಹೆಸರಿನಲ್ಲಿ ವಿಭಜನೆಯ ಚರಿತ್ರೆಯೇ ಅಡಕವಾಗಿದೆ. ಎಲ್ಲ ನೆನಪಾಯಿತಯ್ಯ......

''ಇನ್ನು ಆ 'ಮರ್ಲಿನ್ ಮನ್ರೋ' ಳ ಭಾವಚಿತ್ರ. ಅಲ್ಲಯ್ಯ... ಆ ಸಂಪಾದಕನಿಗೆ ಯಾವ ಚಿತ್ರ ಹಾಕಬೇಕು, ಯಾವದು ಹಾಕಬಾರದು ಎಂಬ ಪರಿಜ್ಞಾನವೇ ಬೇಡವೇನಯ್ಯ? ಪಾಪಿ, ಮರ್ಲಿನ್ ಮನ್ರೋಳ ಚಿತ್ರ ಹಾಕಿಬಿಟ್ಟಿದ್ದಾನಯ್ಯ ......ಈ ವಯಸ್ಸಿಗೆ ಮೊದಲೇ ನಿದ್ದೆ ಬೀಳುವುದಿಲ್ಲ''

ಎನ್ನುತ್ತಾ ಹಿರಿಯರು ಬಹಳ ಹಲುಬಿದರು.

**ಶ್ರೀನಿವಾಸ ವೈದ್ಯ**

# ಆರಾಧಕ

**- ಪ್ರಕಾಶ್**

ಅವರು ಸಂಚರಿಸುತ್ತಿದ್ದ ನಾಡು ಶಾಂತವಾಗಿತ್ತು, ಮನೋಹರವಾಗಿತ್ತು. ಎಲ್ಲೆಲ್ಲೂ ಹಸಿರು ಸೂಸುವ ಕಬ್ಬಿನ ಬೆಳೆ, ನೀಲಾಕಾಶ, ತಂಗಾಳಿ ಇವೆಲ್ಲ ಅವರನ್ನು ಆಕರ್ಷಿಸುತ್ತಿದ್ದವು. ಶಂಕರ್ ಕಾರ್ ನಿಲ್ಲಿಸಿ ಸ್ವಲ್ಪ ಹೊತ್ತು ನಡೆಯೋಣ ವಿಮಲಾ ಎಂದ. ಇಬ್ಬರೂ ರಸ್ತೆಯ ಬದಿಯಲ್ಲಿ ನಡೆಯತೊಡಗಿದರು. ಎಳನೀರು ಮಾರುವವನೊಬ್ಬ ಇದಿರಾದ. ಸಿಹಿಯಾದ ಎಳನೀರನ್ನು ಸೇವಿಸಿ, ನಡುಗೆ ಮುಂದುವರೆಸಿದರು.

ದೂರದಲ್ಲಿ ಒಂದು ಕಮಾನಿನಂತೆ ಕಂಡು ಬಂತು. ಅದು ವಿಧ ವಿಧವಾದ ಬಣ್ಣಗಳ ಹೂಗಳಿಂದ ಅಲಂಕೃತವಾಗಿತ್ತು. ಇಬ್ಬರೂ ಅದರೆಡೆಗೆ ನಡೆದರು. ಹತ್ತಿರ ಹೋದಂತೆ, ಚಿಕ್ಕದಾದರೂ ಚೊಕ್ಕದಾದ ಹೂದೋಟ ಕಂಡು ಬಂತು. ಯಾರು ಇಷ್ಟು ಚೆನ್ನಾಗಿ ಈ ಗಾರ್ಡನ್ ಇಟ್ಟಿದ್ದಾರೆ ಅಂತ ಅವರಿಗೆ ಆಶ್ಚರ್ಯ. ಈ ತೋಟದ ಮಧ್ಯದಲ್ಲಿ ಒಂದು ಪುಟ್ಟ ಕೊಳ. ಅದರ ಮಧ್ಯೆ ಒಂದು ಕರಿಯ ಶಿಲೆಯ ಲಿಂಗ. ಹತ್ತಿರವೇ ಇದ್ದ ಕಲ್ಲು ಬೆಂಚಿನ ಮೇಲೆ ಕುಳಿತ ದಂಪತಿಗಳು ಪ್ರಕೃತಿಯ ಸೆಳೆತದಿಂದ ನಿಶ್ಯಬ್ದವಾಗಿ ಕುಳಿತರು.

'ನಮಸ್ಕಾರ!' ಶಂಕರ್, ವಿಮಲ ಬೆಚ್ಚಿ ನಿಂತರು. 'ಸಾರಿ, ನಿಮಗೆ ಡಿಸ್ಟರ್ಬ್ ಆಯಿತೇನೋ' ಅಂದ ಆತ. ಅವನಿಗೆ ಸುಮಾರು ಐವತ್ತು ವಯಸ್ಸು, ದೃಢಕಾಯ, ಆರೋಗ್ಯಯುತ ಕಂದು ಬಣ್ಣ, ಪಂಚೆ - ಜುಬ್ಬ ಧರಿಸಿದ್ದ ಆತ ಸಂಭಾವಿತನಂತೆ ಕಂಡ. 'ನಾನು ಇಲ್ಲೇ ಹತ್ತಿರದ ಹಳ್ಳೀಲಿ ಮನೆ ಮಾಡಿದೀನಿ! ಒಬ್ಬಂಟಿಗ ಈ ತೋಟ ನನ್ನ ಜೀವಾಳ; ತೋಟ ಒಂದೇ ಅಲ್ಲ ದೇಗುಲ ಕೂಡ ' ಅಂದ. 'ನಿಮಗೆ ಕಾಲಾವಕಾಶ ಇದ್ದರೆ ನನ್ನ ಕತೆ ಹೇಳ್ತೀನಿ' ಅಂತಲೂ ಸೇರಿಸಿದನು.

ಇಬ್ಬರೂ 'ಹೇಳಿ' ಅಂತ ಒಕ್ಕೊರಲಿನಿಂದ ಹೇಳಿದರು. ಆತ ಶುರುಮಾಡಿದ ನನ್ನ ಹೆಸರು ಶಿವಣ್ಣ ಅಂತ. ನನ್ನ ಪೂರ್ವಕಾಲದ ಹೆಸರು ಈಗ ಬೇಡ. ಹಲವು ವರ್ಷಗಳ ಹಿಂದೆ ನಾನೂ ನಿಮ್ಮ ತರಹಾನೇ ಜೀವನ ಯಾತ್ರೆ ಶುರುಮಾಡಿದೆ. ಅದು ಯಾವ ಗ್ರಹಕಾಟವೋ ವಿಧಿ ನನಗೆ ಒಂದಾದ ಮೇಲೆ ಒಂದರಂತೆ ಏಟುಗಳನ್ನೇ ಕೊಡುತ್ತಾ ಬಂತು. ಒಂದು ಸಾರಿ ನದಿಗೆ ಬೀಳೋಣ ಅಂತ ಆಲೋಚಿಸಿದೆ. ಆದರೆ ಆಗಲೂ ವಿಧಿ 'ಹೇಡಿ! ನೀನೆಲ್ಲೋ ಬೀಳ್ತೀಯ ನದೀಲಿ' ಅಂತ ಅಣಕಿಸಿದ ಹಾಗೆ ಭಾವನೆ ಬಂತು. ಈ ಊರಿನ ಹತ್ತಿರಕ್ಕೆ ಬಂದೆ. ಅಲ್ಲಿ ಪುಣ್ಯಾತ್ಮರು ಒಬ್ಬರು ಒಂದು ಕೆಲಸ ಕೊಡಿಸಿದರೂ, ಮನಸ್ಸಿಗೆ ಶಾಂತಿ ಸಿಗಲಿಲ್ಲ. ನಾವಿಲ್ಲಿ ಇರೋ ಜಾಗಕ್ಕೆ ಐದು ವರ್ಷದ ಹಿಂದೆ ಬಂದೆ. ಈಗ ನೀವು ನೋಡ್ತಿರೋ ಲಿಂಗ ಒಂದು ಪಾಳು ಬಿದ್ದ ದೇವಸ್ಥಾನದಲ್ಲಿತ್ತು. ಒಂದು ವರ್ಷ ಹಗಲೆಲ್ಲ ದುಡಿದು ಈ ಹೂದೋಟ ಕಲ್ಪಿಸಿದೆ, ಕಾವೇರಿ ತಾಯಿಯ ಆಶೀರ್ವಾದ! ಈ ಗಿಡಗಳೇ ನನ್ನ ಬಂಧು ಬಳಗ! ಈ ಲಿಂಗ ಪೂಜೆ ಮಾಡುಕ್ಕೆ ಅಂತ ಜನ ಬರುತ್ತಾರೆ. ಅವರ ಜೊತೆ ನಾನೂ ಪ್ರಾರ್ಥನೆ ಮಾಡ್ತೀನಿ. ರೈತರೆಲ್ಲಾ ರೇಗಿಸ್ತಾರೆ, ಒಂದು ಮಂಗಳಾರತಿ ಇಟ್ಟುಕೋ ಅಯ್ಯ, ಎರಡು ಕಾಸಾದರೂ ಗಿಟ್ಟುತ್ತೆ ಅಂತ. ಯಾಕೋ 'ನನ್ನ' ದೇವರು ಅದನ್ನ ಮೆಚ್ಚಲ್ಲ ಅಂತ ಅನ್ನಿಸುತ್ತೆ.

ಅಂದ ಹಾಗೆ ಈ ದೇವಸ್ಥಾನ ಸುಮಾರು ನಾನೂರು ವರ್ಷದಿಂದ ಇತ್ತಂತೆ. ಹೈದರಾಲಿಯ ಸೈನಿಕರು ಅಟ್ಟಹಾಸದಿಂದ ಬಂದು ಈ ದೇವಾಲಯಕ್ಕೆ ಲಗ್ಗೆ ಹಾಕಿದರಂತೆ. ಚಿನ್ನ ಬೆಳ್ಳಿ ಏನೂ ಸಿಗಲಿಲ್ಲ ಅವರಿಗೆ. ಅಲ್ಲೇ ನಡುಗುತ್ತ ನಿಂತಿದ್ದ ಅರ್ಚಕನನ್ನ ಗಾಯಗೊಳಿಸಿ ದೌಡಾಯಿಸಿದರಂತೆ. ನಾಲ್ಕು ಜನ ಅಶ್ವಾರೋಹಿಗಳು ಕೇಕೆ ಹಾಕುತ್ತ ಹೋಗುತ್ತಿದ್ದಾಗ, ಭೂಮಿ ಬಿರುಕು ಬಿಟ್ಟು ಎಲ್ಲರೂ ಭೂಗರ್ಭದಲ್ಲಿ ಮುಳುಗಿದರಂತೆ. ಇದೇ ಇಲ್ಲಿಯ ಇತಿಹಾಸ.

ಕತೆ ಕೇಳುತ್ತ ದಂಪತಿಗಳು ನಿಶ್ಚಲರಾಗಿ ಕುಳಿತಿದ್ದರು, ಶಿವಣ್ಣನ ಜೀವನದ ಬಗ್ಗೆ ಅವರಿಗೆ ಮರುಕ ಬಂದದ್ದು ಆಶ್ಚರ್ಯವಿಲ್ಲ. ಅಲ್ಲಿಂದ ಹೊರಡೋಣ ಎಂದು ಎದ್ದರು. ಶಂಕರ್ ಒಂದು ಕವರ್ ಕೊಟ್ಟು, 'ಶಿವಣ್ಣ ಇದು ನಮ್ಮ ಗಿಫ್ಟ್ ಅಂತ ಸ್ವೀಕರಿಸಬೇಕು' ಅಂದು ಹೊರಟರು.

★★★

ಗುಲಾಬಿ ಗಿಡಗಳ ಪೊದೆಯ ಹಿಂದಿನಿಂದ ಒಬ್ಬ ಯುವತಿ ಬಂದಳು, ನಸುನಗುತ್ತ, 'ಎಷ್ಟು ಕೊಟ್ಟರು?' ಎಂದಳು. ಶಿವಣ್ಣ 'ಐನೂರು' ಎಂದು ಸಂತುಷ್ಟನಾಗಿ ಹೇಳಿದ.

☆

## ಪುಸ್ತಕ ಹುಡುಕಾಟ

ಅದೊಂದು ಪುಸ್ತಕ ಸಂತೆ. ಕೊಳ್ಳುವವರು ಸುಮ್ಮನೇ ನೋಡುವವರು ಹೆಚ್ಚಿದ್ದರು. ಅವರುಗಳ ಮಧ್ಯದಲ್ಲಿ ಅತ್ತ ಇತ್ತ ನೋಡಿ ತಮಗೆ ಇಷ್ಟದ ಪುಸ್ತಕ ಹೆಗಲಿನ ಚೀಲಕ್ಕೆ ಬಿಟ್ಟುಕೊಳ್ಳುವವರೂ ಇದ್ದರು. ತರಹೇವಾರಿ ಪುಸ್ತಕಗಳು ಇದ್ದವು. ವಿಜ್ಞಾನ, ಅಡಿಗೆ, ಕಾದಂಬರಿ, ಹಾಸ್ಯ, ಪತ್ತೇದಾರಿ, ಆಡಳಿತಾತ್ಮಕ ವಿಚಾರಗಳು ಹೀಗೆ.

ಶ್ರೀಮತಿ ಪುಸ್ತಕ ಸಂತೆಗೆ ಓಡೋಡಿ ಬಂದಳು. ಸರ ಸರ ಅಂತ ಸಂತೆಯೊಳಗೆಲ್ಲಾ ಓಡಿ ಓಡಿ ಹುಡುಕಿದಳು. ಅದನ್ನು ಅವಳ ಗೆಳತಿ ರಾಗಿಣಿ ನೋಡಿ ಅಚ್ಚರಿಯಿಂದ ಲೇ ಶ್ರೀಮತಿ ನೀನು ಇಲ್ಲಿಗೆಲ್ಲಾ ಬರೋಲ್ಲ, ನಿನ್ನ ಓಡಾಟ, ಹಾರಾಟ ಏನಿದ್ರೂ ಮಾಲ್‌ಗಳಲ್ಲಿ ಅಂಥಾದ್ರಲ್ಲಿ ಇಲ್ಲಿ ಯಾವ ಬುಕ್ ಕೊಂಡ್ಕೊಬೇಕು ಅಂತ ಬಂದೆ ಅಂತ ಕೇಳಿದಳು. ಅದಕ್ಕೆ ಶ್ರೀಮತಿ ನನಗೆ ಚೆಕ್ ಬುಕ್ ಬೇಕಿತ್ತು ಕಣೆ ಅದಕ್ಕೆ ಬಂದೆ ಅಂದಳು. ರಾಗಿಣಿ ನಗುತ್ತಾ ಲೇ ಚೆಕ್ ಬುಕ್ ಇಲ್ಲೆಲ್ಲಾ ಮಾರೋಲ್ಲ ಕಣೆ ಅಂದಾಗ ತುಟಿಯೂದಿಸಿ ಶ್ರೀಮತಿ ಅದು ನನಗೂ ಗೊತ್ತು ಕಣೆ. ನನ್ನ ಗಂಡ ಪುಸ್ತಕ ಸಂತೆಗೆ ಹೋಗ್ತೀನಿ ಅಂತ ಬಂದ್ರು. ಚೆಕ್ ಬುಕ್ ಎಲ್ಲಿ ಇಟ್ಟಿದಾರೋ ಗೊತ್ತಿಲ್ಲ. ಅದಕ್ಕೆ ಅವರನ್ನು ಹುಡುಕಿ ಚೆಕ್ ಬುಕ್ ಇಟ್ಟಿರೋ ಜಾಗ ತಿಳ್ಕೊಂಡು ಹೋಗೋಣ ಅಂತ ಬಂದೆ ಅಂತ ಶ್ರೀಮತಿ ಅನ್ನುವಾಗ ಅವಳ ಗಂಡ ಕಂಡೂ ಕಾಣದಂತೆ ಸ್ಕೂಟರ್ ಏರಿ ಹೋಗಿದ್ದನ್ನು ರಾಗಿಣಿ ನೋಡಿದಳು. ಅವಳು ನಗುತ್ತಾ ಹೌದಾ ಹಾಗಾದರೆ ನಿನ್ನ ಗಂಡನ್ನ ಹುಡುಕು ನಿನಗೆ ಚೆಕ್ ಬುಕ್ ಸಿಕ್ಕಿದ ಹಾಗೇ ಅಂದು ಅಣಕಿಸಿ ಮುಂದೆ ಹೋದಳು.

*ಸುಕೇಶವ*

# ಬಸ್ ಧಾರಾವಾಹಿ

**- ಸಹನಾ ಪ್ರಸಾದ್**

**ಭು**ಸು ಭುಸು ಉಸಿರು ಬಿಡುತ್ತಾ ಬಸ್ ಏರಿ, ಸೀಟೆಲ್ಲಾದರೂ ಖಾಲಿ ಇದೆಯೇನೋ ಎಂದು ಎಲ್ಲ ಕಡೆ ಕಣ್ಣು ಹಾಯಿಸಿದೆ. ಒಂದೆರಡು ಯುವ ಜೋಡಿಗಳು ಒಬ್ಬರನ್ನೊಬ್ಬರು ಅಂಟಿ ಕೂತಿದ್ದರು. ಇನ್ನು ಕೆಲವು ವಯಸ್ಸಾದ ಅಜ್ಜ, ಅಜ್ಜಿಯರು, ಮಕ್ಕಳನ್ನು ತೊಡೆ ಮೇಲೆ ಕೂರಿಸಿಕೊಂಡ ತಾಯಂದಿರು, ಹಾ ... ಒಂದು ಸೀಟಿನಲ್ಲಿ ಇಬ್ಬರು ಟೀನ್ ಏಜ್ ಹುಡುಗಿಯರಿದ್ದರು. ಮೆಲ್ಲಗೆ ಆ ಸೀಟಿನ ಹತ್ತಿರ ನಡೆದೆ. ಅಂದುಕೊಂಡಂತೆ ''ಕೂತ್ಕೊಳ್ಳಿ ಆಂಟಿ'' ಎಂದು ಒಬ್ಬಳು ಎದ್ದಳು. ನನ್ನ ಧಡೂತಿ ದೇಹ ನೋಡಿಯೋ ಇಲ್ಲ, ಮೆಹಂದಿ ಹಾಕಿದರೂ ಇಣುಕುತ್ತಿದ್ದ ಬಿಳಿ ಕೂದಲಿನ ಮಹಿಮೆಯೋ ಗೊತ್ತಿಲ್ಲ. ''ಸದ್ಯ, ಆಂಟಿ ಅಂದಳಲ್ಲ'' ಎಂದು ಸಮಾಧಾನದ ಉಸಿರೆಳೆದೆ. ಈಚೀಚೆಗೆ ''ಆಂಟಿ'' ಎಂದು ಕರೆಸಿಕೊಳ್ಳಲು ನನಗೆ ಬಲು ಖುಷಿ. ''ಅಕ್ಕ '' ಪದವಿಯನ್ನು ದಾಟಿಯಾಯಿತು. ''ಅಜ್ಜಿ'' ಎನ್ನದಿದ್ದರೆ ಸಾಕು ಎಂದು ಸಂತಸವಾಗುತ್ತದೆ. ಧಪ್ ಎಂದು ಕೂತು, ಅಡ್ಜಸ್ಟ್ ಮಾಡಿಕೊಂಡೆ. ಗೆಳತಿ ಎದ್ದಳೆಂದು ಅವಳ ಪಕ್ಕ ಕೂತ ಹುಡುಗಿಯೂ ಎದ್ದು, ಇಡೀ ಸೀಟು ನನ್ನದಾಯಿತು. ಪಕ್ಕದಲ್ಲಿ ನನ್ನ ಕೈಲಿದ್ದ ಬ್ಯಾಗುಗಳನ್ನಿಟ್ಟು ಆರಾಮವಾಗಿ ಕೂತು, ನನ್ನ ಪ್ರಿಯವಾದ ಕೆಲಸ ಅಂದರೆ ಇವರ ಮಾತುಗಳನ್ನು ಕೇಳುವ ಕೆಲಸ ಷುರು ಮಾಡಿದೆ. ನನಗೆ ಸೀಟು ಕೊಟ್ಟ ಹುಡುಗಿಯರು ಪಿಸಪಿಸ ಮಾತಾಡುತ್ತಲೇ ಇದ್ದರು. ''ಇಲ್ಲ ಕಣೆ, ನಾ ಅವನಿಗೆ ಎಷ್ಟು ಸಲ ಹೇಳಿದ್ದೇನೆ, ನನ್ನ ಡ್ರೆಸ್ ತಂಟೆಗೆ ನೀ ಬರಬೇಡ, ಕುರ್ತಿ ಉದ್ದವಾಗಿಲ್ಲ, ನೀನು ಕುಳಿತಾಗೆಲ್ಲ ಅದು ಮೇಲೆ ಹೋಗುತ್ತದೆ, ಇನ್ನು ಸ್ವಲ್ಪ ಸಡಿಲವಾಗಿ ಹೊಲೆಸು, ಇಷ್ಟು ಬಿಗಿಯಾದ ಲೆಗ್ಗಿಂಗ್ಸ್ ಹಾಕಿಕೊಳ್ಳಬೇಡ, ನನ್ನ ಗೆಳೆಯ ರಾಕೇಶನನ್ನು ಫೇಸ್ ಬುಕ್‌ನಲ್ಲಿ ಯಾಕೆ ಆಡ್ ಮಾಡಿಕೊಂಡೆ? ಹೀಗೆಲ್ಲಾ ನೀ ಕೇಳಿದರೆ ಈಗಲೇ ಬ್ರೇಕ್ ಅಪ್ ಆಗಲಿ'' ಎಂದು ದಬಾಯಿಸಿದೆ. ಒಬ್ಬಳ ಮಾತಿಗೆ ಇನ್ನೊಬ್ಬಳ ಕೊಕ್ಕು ''ಸರಿಯಾಗಿ ಹೇಳಿದೆ ಕಣೆ, ಹೇಗಿದ್ದರೂ ಆ ಸುಮುಖ್ ನಿನ್ನ ಕಂಡರೆ ಇಷ್ಟ ಪಡುತ್ತಾನೆ, ಅವನು ಇವನಿಗಿಂತ ಎಷ್ಟೋ ಮೇಲು, ಆದರೆ ತಕ್ಷಣ ಬೇಡ, ಸ್ವಲ್ಪ ಆಟ ಆಡಿಸಿ ಆಮೇಲೆ ಷುರು ಮಾಡಿಕೊ.''

**ಬಸ್ ಧಾರಾವಾಹಿಯ ಒಂದು ಝಲಕ್ ಇಲ್ಲಿದೆ**

ಆ ಹೆಣ್ಣುಮಕ್ಕಳು ತೊಟ್ಟ ಬಟ್ಟೆ ಗಮನಿಸಿದಾಗ ಬಹಳ ಸಾಮಾನ್ಯ ದರ್ಜೆಯ ಮನೆತನದವರು ಎಂದೆನಿಸಿತು. ಅಬ್ಬಬ್ಬಾ, ಈಗಿನ ಕಾಲದ ಹೆಣ್ಣು ಮಕ್ಕಳು. ''ರೀ, ನೀವು ನನ್ನ ಕೈ ಬಿಡೋದಿಲ್ಲ ತಾನೆ?'' ದೈನ್ಯದಿಂದ ಮಾತಾಡುತ್ತಿದ್ದ ನಮ್ಮ ಕಾಲದ ಹೆಣ್ಣು ಮಕ್ಕಳನ್ನು ನೆನಪಿಸಿಕೊಂಡೆ. ಬ್ರೇಕ್ ಅಪ್ ಅಂದರೆ ಕೈಕೊಡುವುದು ಶೋಕಾಚರಣೆಯ ವಿಷಯ, ಅದರಲ್ಲೂ ಹೆಣ್ಣು ಮಕ್ಕಳಿಗೆ, ಆರ್ಥಿಕವಾಗಿ ಕೆಳಮಟ್ಟದಲ್ಲಿದರೆ ಕೆಲವೊಮ್ಮೆ

ಬದುಕೇ ಮುಗಿದುಹೋಗುತ್ತಿತ್ತು. ಆದರೆ ಈಗ ಅದು ಸಾಮಾನ್ಯವಾದ ವಿಷಯ. ಅವರ ಮಾತು ಈಗಿನ ಗೆಳೆಯ ಹಾಗೂ ಸುಮುಖನಿಂದ ದೂರವಾಗಿ ನವೀನ ಮಾದರಿಯ ಉಡುಪುಗಳು, ಇಯರ್ ಫೋನ್‌ಗಳು, ಮೇಕಪ್ಪುಗಳತ್ತ ಸರಿದಾಗ ನನ್ನ ಗಮನವೂ ಹಿಂದಿನ ಸೀಟಿನಿಂದ ನಿರಂತರವಾಗಿ ಹರಿದು ಬರುತ್ತಿದ್ದ ಆವಾಜಿನತ್ತ ಸರಿಯಿತು. ಸೊಗಸಾದ ಸೀರೆ, ಅಚ್ಚುಕಟ್ಟಾಗಿ ಉಟ್ಟು, ಡೈ ಮಾಡಿರುವುದೆಂದು ಸಾರಿ ಹೇಳುತ್ತಿರುವ ಕೂದಲನ್ನು ನೀಟಾಗಿ ಬಾಚಿ, ಗಟ್ಟಿ ಧ್ವನಿಯಲ್ಲಿ ಮಾತಾಡುತ್ತಿದ್ದ ಒಬ್ಬಾಕೆ. ಮುಖದ ಸುಕ್ಕುಗಳನ್ನು ಸೊಗಸಾದ ಕ್ರೀಮ್‌ಗಳಿಂದ ಮರೆಮಾಚಿದ್ದರೂ ಕಣ್ಣಂಚಲಿ, ತುಟಿಯಂಚಲಿ ಅವು ಇಣುಕುತ್ತಿದ್ದವು. ''ಇಲ್ಲಮ್ಮ, ನನ್ನ ಮಗನದೂ ತಪ್ಪಿದೆ. ನಾ ಏನು ಹೇಳಿದರೂ ಅವನದು ಒಂದೇ ಮಾತು. ನನ್ನ ಹೆಂಡತಿಯ ತಂಟೆಗೆ ಬರಬೇಡ. ಅವಳಿಗೆ ನಾನ್‌ವೆಜ್ ತಿನ್ನದಿದ್ದರೆ ಆಗುವುದಿಲ್ಲ. ಅವಳು ಬೆಳೆದ ರೀತಿಯೇ ಅದು. ನಿನಗಿಷ್ಟವಿಲ್ಲದಿದ್ದರೆ ನಾವು ಬೇರೆ ಹೋಗುತ್ತೇವೆ'' ಆ ಕಡೆಯಿಂದ ಬಂದ ಉತ್ತರದಿಂದ ಕೆಲ ಕ್ಷಣಗಳು ಮೌನ. ''ನಾನು ಮದುವೆಯಾದಾಗ ನನ್ನತ್ತೆ ನನಗೆ ತುಂಬಾ ಇರ್ರಿಟೇಟ್ ಮಾಡುತ್ತಿದ್ದರು. ಚೂಡಿದಾರ್ ಹಾಕಬೇಡ. ತೋಳಿಲ್ಲದ ರವಿಕೆ ಚೆನ್ನಾಗಿ ಕಾಣುವುದಿಲ್ಲ. ಹಾಗೆ ಹೀಗೆ, ಅದಕ್ಕೆ ನಾನು ಬೇರೆ ಮನೆ ಮಾಡಿದೆ. ಇವನು ಬೇರೆ ಜಾತಿಯ ಹುಡುಗಿಯನ್ನು ವರಿಸಿದಾಗ ನಾನು ನನ್ನ ಗಂಡ ಒಪ್ಪಲಿಲ್ಲವೇ, ಅವಳು ಸ್ವಲ್ಪ ಅಡ್ಜಸ್ಟ್ ಮಾಡಬಾರದೆ?'' ಪರವಾಗಿಲ್ಲ, ಮಗಳಿಗೆ ಸರಿಯಾಗಿ ಬುದ್ಧಿ ಹೇಳುತ್ತಿರುವ ಆ ತಾಯಿಯನ್ನು ಮೆಚ್ಚಿ ಗಮನವನ್ನು ಬೇರೆಡೆ ಬಿಟ್ಟೆ. ''ಪ್ಲೀಸ್ ಅರ್ಥ ಮಾಡಿಕೋ, ನೀ ಕೆಲಸ ಬಿಟ್ಟರೆ ಮನೆಯ ಜವಾಬ್ದಾರಿ ನನ್ನೊಬ್ಬನ ಮೇಲೆ ಬೀಳುತ್ತದೆ, ಇನ್ನು ಒಂದೆರಡು ವರ್ಷಗಳು, ತಂಗಿಯ ಮದುವೆಯಾಗಿಬಿಟ್ಟರೆ ನಾನು ನೀನು ನಮ್ಮ ಸಂಸಾರವನ್ನು ಬೆಳೆಸಲು, ನೀ ಮಕ್ಕಳನ್ನು ನೋಡಿಕೊಂಡು ಹಾಯಾಗಿರಲು ಆಗುತ್ತದೆ. ಅಲ್ಲಿಯವರೆಗೂ ಆ ಬಾಸ್ ಕಿರುಕುಳ ತಡೆದುಕೊ, ಹೇಗಾದರೂ ಮ್ಯಾನೇಜ್ ಮಾಡು, ನೀ ಜಾಣೆ, ನನಗೆ ಗೊತ್ತು'' ಗಂಡನ ಮಾತಿಗೆ ಅವಳ ಕಣ್ಣು ತುಂಬಿದ್ದನ್ನು ನೋಡಲಾಗದೆ ಕಿಟಿಕಿಯಿಂದಾಚೆ ಕಣ್ಣು ಹಾಯಿಸಿದೆ. ''ಸ್ವಲ್ಪ ಜಾಗ ಕೊಡುತ್ತೀರಾ'' ಸಣ್ಣಕ್ಕೆ ಉದ್ದಕ್ಕಿದ್ದ ಆ ಹೆಂಗಸು ನನಗೆ ಒತ್ತರಿಸಿಕೊಂಡು ಕೂತ ತಕ್ಷಣವೇ ರವಕೆಯೊಳಗೆ ಕೈಹಾಕಿ ಸೆಲ್ ಫೋನ್ ತೆಗೆದಳು. ''ಏನೇ ಕಳ್ಳ ..., ಹಾ... ನನಗೆ ಆಟ ಆಡಿಸುತ್ತೀಯ? ಹಣ ಕಟ್ಟಿದೆ ಅಂತ ನನ್ನ ಬಳಿಯೇ ಸುಳ್ಳು ಹೇಳುತ್ತೀಯ? ನಿನ್ನ, ನಿನ್ನ ...'' ಅವಳ ಬಾಯಿಗೆ ಇಡೀ ಬಸ್ಸು ಸ್ತಬ್ದವಾಯಿತು. ಆ ಕೆಟ್ಟ ಬೈಗುಳಗಳು, ಅವಾಚ್ಯ ಪದಗಳು, ಅಬ್ಬ ಹೆಂಗಸಿನ ಬಾಯಿಂದ ಈ ಥರದ ಮಾತುಗಳೇ.''

''ಯಾರ್‍ರೀ ಜಯನಗರ''? ನಿರ್ವಾಹಕನ ಮಾತು ಕೇಳಿ ಎದ್ದವಳ ಮನಸ್ಸು ವಿಚಿತ್ರ ಸುಳಿಗೆ ಸಿಕ್ಕಿತ್ತು. ಮನೆಗೆ ಬಂದಾಗ ಟೀವಿ ಹಾಕಬೇಕೆನಿಸಲೇ ಇಲ್ಲ. ಸಿಹಿ ಕಹಿ ಮಸಾಲ ಬೆರೆತ ಧಾರಾವಾಹಿಯನ್ನು ನೋಡಿದ ಹಾಗೆ ಭಾಸವಾಗಿತ್ತು.

☆

# ಸುಸ್ತಾದರು

**- ಹಾ.ಮ್ಯೆ. ಸೂರಿ**

**ನ**ಮ್ಮ ಊರಿನಲ್ಲಿ ರಂಗಮ್ಮ ಸುಬ್ಬಮ್ಮ ಇಬ್ಬರೂ ಆತ್ಮೀಯ ಗೆಳತಿಯರು, ಯಾವ ಕಾರ್ಯಕ್ರಮಕ್ಕೆ ಹೋಗಬೇಕಾದರೂ ಇಬ್ಬರೂ ಸಿಂಗಾರ ಮಾಡಿಕೊಂಡು ಒಟ್ಟಿಗೆ ಹೋಗಿ ಬರುತ್ತಿದ್ದರು.

ಒಂದು ದಿನ ರಂಗಮ್ಮನವರು ಸಿಂಗಾರ ಮಾಡಿಕೊಂಡು, ಹೊಸ ಸೀರೆ ಉಟ್ಕೊಂಡು, ಪೌಡರ್, ಸ್ನೊ ಬಳಕೊಂಡು ಎಲ್ಲೊ ಹೊರಡಲು ರೆಡಿಯಾಗ್ತಿದ್ದರು.

ಆಗಲೇ ಸುಬ್ಬಮ್ನೋರು ಅವರ ಮನೆಗೆ ಬಂದರು. ಬಾಗಿಲ ಬಳೀನೇ, ''ಏನೇ ರಂಗೂ, ಎಲ್ಲೋ ಹೋಗಕ್ಕೆ ತಯಾರಾಗ್ತಾ ಇದೀಯಲ್ಲ, ನನಗೆ ಹೇಳಲೇ ಇಲ್ಲ. ನಾನು ಬರ್ತೀನಿ ತಡೀ'' ಎಂದರು.

''ಊರ ಹೊರಗಿನ ಆಟದ ಮ್ಯೆದಾನದಲ್ಲಿ ಎರಡು ದಿನದಿಂದ ಪೆಂಡಾಲ್ ಕಟ್ತಾ ಇದ್ದಾರಂತೆ. ನಮ್ಮುಡುಗ ಹೇಳ್ದ. 'ಜಟಕಾ ಗಾಡಿ ಹತ್ಕೊಂಡು ಪ್ಯಾಟಿಗ್ಹೋಗಾಂವಾ' ಅಂತ ಸಿನಿಮಾ ಹಾಡು ಹಾಕ್ತಾ ಇದ್ದಾರೆ, ಕೇಳು.. ಕೇಳಿಸ್ತಾ ಇದೆಯಾ.... ಅಲ್ಲಿ ಇವತ್ತು ಸಮಾರಂಭ ಅಂತೆ. ಅಲ್ಲಿಗೆ ಹೋಗಿ ಬರೋಣ ಬಾ. ಪುಕ್ಕಟೆ ಪ್ರವೇಶ ಮನೆ ಕೆಲಸ ದಿನಾ ಇದ್ದದ್ದೆ, ಬೇಗ ಬೇರೆ ಹೊಸ ಸೀರೆ ಉಟ್ಕೊಂಡು ಬಾ, ನಡೀ ನಡೀ'' ಎಂದರು ರಂಗಮ್ಮ.

''ಆಯ್ತು ಆಯ್ತು, ಈಗ ಬಂದೆ'' ಎಂದು ಹೇಳುತ್ತಾ ತಮ್ಮ ಮನೆಗೆ ಹೋಗಿ ಐದೇ ನಿಮಿಷದಲ್ಲಿ ಥಟ್ಟನೆ ಹೊರ ಹೋಗಲು ರೆಡಿ ಆಗಿ ಬಂದರು ಸುಬ್ಬಮ್ಮ.

''ಮಳೆ ಬಂದ್ರೆ ಛತ್ರಿ ಇರಲಿ ಅಂತ ತಂದೆ'' ಎಂದರು ಸುಬ್ಬಮ್ಮ ಛತ್ರಿ ತಿರುವುತ್ತ.

''ನಾಯಿ ಗೀಯಿ ಬಂದ್ರೆ ಓಡಿಸಕ್ಕೆ ನನ್ನ ಊರುಗೋಲು ಇದ್ರೆ ಒಳ್ಳೇದೇ'' ಎಂದು ಊರುಗೋಲು ತಗೊಂಡು ರಂಗಮ್ಮನೂ ಹೊರಟರು.

'ಏನು ಮನರಂಜನೆ ಕಾರ್ಯಕ್ರಮ ಇರುತ್ತೋ?'' ಎಂದರು ರಂಗಮ್ಮ

''ಇನ್ನೇನು, ನೃತ್ಯ, ಸಂಗೀತ, ಯಕ್ಷಗಾನ ಇತ್ಯಾದಿ ಇದ್ದೇ ಇರುತ್ತೆ'' ಎಂದರು ಸುಬ್ಬಮ್ಮ.

ಊರ ಹೊರಗಿನ ಮ್ಯೆದಾನದ ಪೆಂಡಾಲ್ ಬಳಿ ಬಂದರು. ಗೇಟಿನ ಒಳ ಹೋಗಲು ಬಂದಾಗ, ಗೇಟ್‌ಕೀಪರ್, ''ಅಜ್ಜೀ, ನೀವು ಯಾಕೆ ಬಂದ್ರೀ, ಮನೇಲಿ ಕೆಲಸ ಇಲ್ಲವೇ?'' ಎಂದು ಬಿಡೋದೆ. ಮುಂದುವರಿದು ''ಅಜ್ಜೀ, ನಿಮ್ಮ ವಯಸ್ಸೇನು?'' ಎಂದು ಆತ ಕೇಳಿದ.

ಕೋಲು ನೆಲದ ಮೇಲೆ ಕುಕ್ಕುತ್ತಾ ''ನಂದೇ ಎಂಭತ್ತೈದು ಆಯ್ತು. ಇವಳದ್ದೂ ಅಷ್ಟೆ... ಒಳಗೆ ಏನು ನಡೀತಿದೆ.'' ಎಂದರು ಸುಬ್ಬಮ್ಮ.

''ನಿರುದ್ಯೋಗಿ ಯುವಕರಿಗೆ ಕೆಲಸ ಕೊಡೋ ಉದ್ಯೋಗ ಮೇಳ!'' ಎಂದು ಆತ ನಗುತ್ತ ಹೇಳಿದಾಗ ಇವರಿಬ್ಬರೂ ವಯೋಭಾರದಿಂದ ಸುಸ್ತಾದರು!

☆

# ದುಬಾಯ್ ಗೋಲ್ಡ್!

- ಸಿ.ಆರ್. ಸತ್ಯ

ಇತ್ತೀಚೆಗೆ ನಾವು ಸ್ವಲ್ಪ ಜನ ದುಬಾಯ್ ಪ್ರವಾಸಕ್ಕೆ ಹೋಗಿದ್ವಿ. ನಮ್ಮ ಗುಂಪಿನಲ್ಲಿ ಹೆಂಗಸರೇ ಜಾಸ್ತಿ ಇದ್ದರು. ಎಲ್ಲರ ಬಾಯಲ್ಲೂ ''ಇಂಡಿಯಾದಲ್ಲಿ ಸಿಗೋ ಚಿನ್ನದ ಬೆಲೆಗಿಂತ ದುಬಾಯ್ನಲ್ಲಿ ಸಿಗೋ ಚಿನ್ನದ ಬೆಲೆ ಕಮ್ಮಿ. ಅದೂ ಅಲ್ಲದೆ ಅಲ್ಲಿ ಖರೀದಿ ಮಾಡಿದ್ರೆ ಲಕ್ಕಿ ಕೂಪನ್ಸ್‌ಗಳೂ ಸಿಗುತ್ವೆ ಅವನ್ನ ಪ್ರತಿ ದಿವಸವೂ ಡ್ರಾ ಮಾಡ್ತಾರೆ. ಮೊದಲನೇ ಬಹುಮಾನ 1 ಕೆಜಿ ಚಿನ್ನ ; ಎರಡನೇ ಬಹುಮಾನ 1/2 ಕೆಜಿ ಚಿನ್ನ ; ಮೂರನೇ ಬಹುಮಾನ 1/4 ಕೆಜಿ ಚಿನ್ನ'' ಅನ್ನೋ ಮಾತೇ ಕೇಳಿಸ್ತಿತ್ತು. ಸರಿ. ದುಬಾಯ್ ಸೇರಿದಮೇಲೆ, ನಮ್ಮ ಗೈಡು ಇವರನ್ನೆಲ್ಲಾ ಚಿನ್ನದ ಮಾರ್ಕೆಟ್‌ಗಳಿಗೆ ಕರ್ಕೊಂಡು ಹೋಗಿ, ಒಂದೆರಡು ಅಂಗಡಿಗಳೊಳಗೆ ಬಿಟ್ಟು ತಾನು ಹಾಯಾಗಿ ಮನೆಗೆ ಹೋದ. ಸರಿ, ನಮ್ಮವರು ರಾತ್ರಿ ತನಕ ಖರೀದಿ ಮಾಡಿದ್ದೂ ಮಾಡಿದ್ದೇ!. ಮಾರನೇ ದಿನ ಬೆಳಿಗ್ಗೇನೆ ಬೆಂಗಳೂರಿಗೆ ಹೊರಡಬೇಕಾದ್ದುದ್ದರಿಂದ, ಅಂಗಡಿಯವರು ಇವರ ಅಡ್ರೆಸ್ಸು, ಇ-ಮೇಲ್ ವಿವರಗಳನ್ನೆಲ್ಲಾ ತೊಗೊಂಡು, ನಿಮಗೇನಾದರು ಪ್ರೈಜ಼್ ಬಂದರೆ ನಾವು ತಕ್ಷಣ ನಿಮಗೆ ಸಂದೇಶ ಕಳಿಸಿ, ಚಿನ್ನವನ್ನು ಬೆಂಗಳೂರಿಗೆ ರವಾನಿಸ್ತೀವಿ. ನೀವು ಹಾಯಾಗಿ ನಾಳೆ ವಾಪಸ್ಸು ಬೆಂಗಳೂರಿಗೆ ಹೊರಡಿ ಅಂತ ಭರವಸೆ ಕೊಟ್ರು. ಆದರೂ ಅವತ್ತು ರಾತ್ರಿ ನಮ್ಮ ಹೆಂಗಸರು ನಿದ್ದೇನೇ ಮಾಡಲಿಲ್ಲ. ಅಪ್ಪ, ದೇವರೇ, ನನಗೆ ಪ್ರೈಜ಼್ ಸಿಗದಿದ್ದರೂ. ನಮ್ಮ ಗುಂಪಿನಲ್ಲಿ ಬೇರೇ ಯಾರಿಗೂ ಸಿಗದ ಹಾಗೆ ನೋಡ್ಕೋಪ್ಪ ಅಂತ ಕೆಲವರು ದೇವರನ್ನ ಬೇಡಿಕೊಂಡರು ಅಂತಲೂ ನನ್ನ ಗುಮಾನಿ. ಬೆಂಗಳೂರಿಗೆ ಬಂದು ಇಳಿದು ಮನೆ ಸೇರಿದ ತಕ್ಷಣ, ಎಲ್ಲರೂ ಒಬ್ಬರಿಗೊಬ್ಬರು ಫೋನ್ ಹೊಡೆದಿದ್ದೂ ಹೊಡೆದಿದ್ದೇ! ಪ್ರೈಜ಼್ ಸಿಕ್ಕಿದರೆ ನನಗೆ ಮುಂಚೆ ತಿಳಿಸೇ ಅಂತಾನೂ ಹೇಳಿಕೊಳ್ಳುತ್ತಿದ್ದರು. ಇಂತಹ ಆತಂಕದ ವಾತಾವರಣದಲ್ಲಿ ನಾನು ಯಾರಿಗೋ ಫೋನ್ ಮಾಡೋಕ್ಕೆ ಫೋನ್ ಎತ್ತಿದೆ. ಆಗ ನನಗೆ ಕೇಳಿಸಿದ ಒಂದು ಕ್ರಾಸ್ ಟಾಕ್‌ನ ಅಕ್ಷರಶಃ ಓದುಗರಿಗೆ ಒಪ್ಪಿಸ್ತಿದೀನಿ. ಈ ಸಂಭಾಷಣೆ ನಡೆದದ್ದು ನಮ್ಮ ಪ್ರವಾಸಿ ಗುಂಪಿನವರೇ ಆದ ಸುಜಾತ ಮತ್ತು ವಿಮಲ, ಇವರಿಬ್ಬರ ನಡುವೆ.

ಸುಜಾತ : ಲೇ ವಿಮಲ, ನೋಡೇ, ನಮ್ಮ ಪಮ್ಮೀಗೆ (ಉರುಫ್ ಪರಿಮಳ - ಈಕೇನೂ ನಮ್ಮ ಪ್ರವಾಸಿ ಗುಂಪಿನಲ್ಲಿದ್ದರು) ಒಂದು ಕೆಜಿ-

ವಿಮಲ : ಅಯ್ಯೋ, ಒಂದು ಕೆಜಿ ಚಿನ್ನ ಅವಳಿಗೆ ಸಿಕ್ತೇನೆ...? ಎಂತಾ ಅನ್ಯಾಯಾನೇ...? ಎಷ್ಟು ಲಕ್ಕೀ ಅಲ್ವಾ ಅವಳು? ಅಲ್ಲ, ಅಲ್ಲಿಗೆ ಹೋಗೋಕ್ಕೆ ಮುಂಚೆ, ನಾನು ದುಬಾಯ್ಗೇ ಬರಲ್ಲ, ಬಂದರೂನೂ ಚಿನ್ನದ ಅಂಗಡಿ ಕಡೆ ಮುಖಾನೂ ತೋರಿಸಲ್ಲ ಅಂತ ಅಂತಿದ್ಲು. ಈಗ ಅವಳಿಗೆ ಒಂದು ಕೆಜಿ ಚಿನ್ನ ಸಿಕ್ತು ಅಂದ್ರೆ, ನಾವೆಲ್ಲಾ ಹೇಗೆ ಸಹಿಸಿಕೊಳ್ಳೋದು? ನಾವೇ ಅಲ್ಲವೇ ಅವಳಿಗೆ ದುಬಾಯ್ ಟ್ರಿಪ್ ಐಡಿಯಾ ಕೊಟ್ಟಿದ್ದು?

ಸುಜಾತ : ನಾನು ಹೇಳೋಕ್ಕೆ ಹೊರ್ಟಿದ್ದು-

ವಿಮಲ : ದೇವರು ಇರೋರಿಗೆ ಇನ್ನಷ್ಟು ಕೊಡ್ತಾನೆ ಅಂತ ಅಲ್ವಾ? ಅವಳಿಗೇನು ಚಿನ್ನ ಬೆಳ್ಳಿ ಒಡವೆಗಳು ಕಮ್ಮಿ ಇವ್ಯೇನು? ಅವಳ ಮಗಳ ಮದುವೆ ರಿಸೆಪ್ಶನ್‌ನಲ್ಲಿ ಆ ಪಾಟಿ ಮೈಮೇಲೆ ಹೇರಿಕೊಂಡಿದ್ದಳಲ್ಲಾ, ನಾವೆಲ್ಲಾ ನೋಡಿಲ್ವೆ? ಈಗ ಈ ಒಂದು ಕೆಜಿ ಚಿನ್ನಾನ ಇನ್ನೆಲ್ಲಿ ಹೇರಿಕೊಳ್ತಾಳೆ ಅಂತೀನಿ-

ಸುಜಾತ : ಒಂದು ಕೆಜಿ-

ವಿಮಲ : ಸರಿ ಅನ್ನು. ಒಂದು ಕೆಜಿ ಚಿನ್ನದ ಒಡವೆ ಹಾಕ್ಕೊಂಡು ಮೆರೆಯೋಕ್ಕೆ ಅವಳೇನೂ ಕ್ವೀನ್ ವಿಕ್ಟೋರಿಯಾ ಕೆಟ್ಟು ಹೋದಳೇ? ಅವಳ ಗಂಡನಿಗೆ ಏನಾದ್ರೂ ಈ ವಿಷಯ ತಿಳಿಸಿದ್ದಾಳೇನು? ಯಾಕೆ ಅಂದ್ರೆ, ಅವಳ ಅತ್ತೆ ಅದನ್ನ ವರದಕ್ಷಿಣೆಯಾಗಿ ಕೊಡು ಅಂತ ಕೇಳೋ ಟೈಪು!

ಸುಜಾತ : ನಾನು ಹೇಳೋದು ಸ್ವಲ್ಪ ಕೇಳು ವಿಮಲ. ಈ ಒಂದು ಕೆಜಿ-

ವಿಮಲ : ನನಗೆ ಗೊತ್ತು ಕಣೆ ನೀನೇನು ಹೇಳ್ತಿ ಅಂತ. ಅವಳಿಗೆ ಅದೃಷ್ಟ ಇತ್ತು ಬಂತು ಅಂತ ತಾನೇ? ನಾನು ಕೇಳೋದು ಇಷ್ಟೆ. ನಾವುಗಳು ಖರೀದಿ ಮಾಡಿದಾಗ ಇಪ್ಪತ್ತು ಜನ ಇದ್ವಿ. ಅದೃಷ್ಟ ಅನ್ನೋದು ಇವಳಿಗೆ ಮಾತ್ರ ಹೊಡೆಯೋದು ಅಂದರೆ ಮೋಸ ಅಲ್ಲವೇನೆ? ನಾವೇನು ದಿನಾ ದುಬಾಯ್‌ಗೆ ಹೋಗ್ತೀವೇ? ನಮ್ಮ ಜೀವಮಾನದಲ್ಲಿ ಒಂದು ಕೆಜಿ ಚಿನ್ನ ಎಂದಾದರೂ ಮುಟ್ಟಿದ್ದೇವೆಯೇ? ಇವಳೇನು ಸ್ಪೆಶಲ್ ಅಂತೀನಿ?

ಸುಜಾತ : ಅವಳು ಸ್ಪೆಶಲ್ ಏನೂ ಇಲ್ಲ ವಿಮಲ. ನಾನು ಹೇಳ್ತಿರೋದು ಈ ಒಂದು ಕೆಜಿ-

ವಿಮಲ : ''ಬೈಚಾನ್ಸ್'' ಅವಳಿಗೆ ಬಂತೂ ಅಂತೀಯಾ? ''ಬೈಚಾನ್ಸ್'' ನನಗೆ ಯಾಕೆ ಬರಲಿಲ್ಲ, ''ಬೈಚಾನ್ಸ್'' ನಿನಗೆ ಯಾಕೆ ಬರಲಿಲ್ಲ ಅಂತೀನಿ? ಇಷ್ಟರ ಮೇಲೆ ಅವಳ ಬುದ್ಧಿ ನಿನಗೆ ಗೊತ್ತೇ ಇದೆ. ಅವಳು ಒಂದು ಕೆಜಿ ಚಿನ್ನಕ್ಕೆ ತೃಪ್ತಿ ಪಟ್ಟುಕೊಳ್ತಾಳೆ ಅಂತ ತಿಳಿದುಕೊಂಡಿದ್ದೀಯಾ? ಖಂಡಿತ ಇಲ್ಲ. ಬೇಕಾದರೆ ನೋಡ್ತಿರು. ಇನ್ನೊಂದು ವಾರದಲ್ಲಿ ದುಬಾಯ್‌ಗೆ ಇನ್ನೊಂದು ಟ್ರಿಪ್ ಹಾಕ್ತಾಳೆ. ಇನ್ನಷ್ಟು ಕೂಪನ್ಗಳನ್ನ ಹೊತ್ಕೊಂಡು ಬರ್ತಾಳೆ. ನಮ್ಮ ದುರಾದೃಷ್ಟಕ್ಕೆ ಆ ಕೂಪನ್ನುಗಳಿಗೂ ಇನ್ನೊಂದು ಅರ್ಧ ಕೆಜಿನೋ ಅಥವಾ ಕಾಲು ಕೆಜಿನೋ ಚಿನ್ನ ದಕ್ಕುತ್ತೆ. ಎಲ್ಲಾ ಬಿಟ್ಟು ಭಾಗ್ಯಲಕ್ಷ್ಮೀಗೆ ಇವಳ ಮೇಲೆ ಯಾಕೆ ಇಷ್ಟೊಂದು ಪ್ರೀತಿ? ಇನ್ನು ಅವಳು ಜಂಬ ಕೊಚ್ಚಿಕೊಂಡು ಓಡಾಡುತ್ತಾ ಇದ್ದರೆ ನನ್ನ ಕೈಲಂತೂ ನೋಡೋಕ್ಕೆ ಸಾಧ್ಯವಿಲ್ಲ ಸುಜಿ-

ಸುಜಾತ : ಯಾಕೆ ಹೀಗೆ ಅಪ್ಸೆಟ್ ಆಗ್ತಿದೀ ಹುಚ್ಚೀ? ಈ ಒಂದು ಕೆಜಿ-

ವಿಮಲ : ನೀನು ಹೇಳೋದು ಅವಳಿಗೆ ಒಂದು ಕೆಜಿ ಚಿನ್ನ ಸಿಕ್ಕಿದರೆ ನಮ್ಮ ತಲೆ ಮೇಲೇನೂ ಆಕಾಶ ಬಿದ್ದಿಲ್ಲ ಅಂತ ತಾನೇ? ನೀನು ಒಬ್ಬಳು ಸಾಧು ಪ್ರಾಣಿ

ಕಣೆ. ಜೀವನದಲ್ಲಿ ದುರಾಸೆ ಇಲ್ಲದಿದ್ದರೂ ಸ್ವಲ್ಪನಾದರೂ ಆಸೆ ಇಟ್ಕೋ. ನಿನಗೆ ಚಿನ್ನ ಸಿಗಲಿಲ್ಲ ಅಂತ ಬೇಜಾರೇ ಆಗ್ತಿಲ್ಲವೇನೇ?

ಸುಜಾತ : ಬೇಜಾರು ಯಾಕೆ ವಿಮಲೂ? ನೋಡು, ಆ ಒಂದು ಕೆಜಿ–

ವಿಮಲ : ಸರಿ, ನಿನ್ನ ಫಿಲಾಸಫಿ ನನಗೆ ಗೊತ್ತು ಬಿಡೆ. ಚಿನ್ನವಿದ್ದರೂ ಜೀವನ ನಡೆಯುತ್ತೆ, ಬೆಳ್ಳಿ ಇದ್ದರೂ ಜೀವನ ನಡೆಯುತ್ತೆ. ಕೊನೆಗೆ ತಗಡಿದ್ದರೂ ಜೀವನ ನಡೆಯುತ್ತೆ ಅನ್ನೋ ಪ್ರಾಣಿ ನೀನು. ನಿನ್ನ ಗಂಡ ಪುಣ್ಯ ಮಾಡಿದ್ದ ಕಣೆ ನಿನ್ನನ್ನ ಕಟ್ಟಿಕೊಳ್ಳೋಕ್ಕೆ! ಇಪ್ಪತ್ತೆರಡು ಕ್ಯಾರೆಟ್‌ನ ಪ್ಯೂರ್ ಚಿನ್ನ ನೀನೇ ಅಲ್ಲಿ ನೋಡಿದ್ಯಲ್ಲ. ಏನು ಹೊಳಪು! ಏನು ಡಿಸೈನ್‌ಗಳು! ಹೆಂಗಸು ಅಂತ ಹುಟ್ಟಿದ ಮೇಲೆ ಅಂತಹವನ್ನ ಮೈಮೇಲೆ ಹಾಕ್ಕೊಳ್ಳದೇ ಇದ್ದರೆ. ಏನೇ ಪ್ರಯೋಜನ? ಏನು ಸಾಧಿಸಬೇಕು ಅಂತ ಅಷ್ಟೊಂದು ದುಡ್ಡು ಖರ್ಚು ಮಾಡ್ಕೊಂಡು ನೀನು ದುಬಾಯ್ ಟ್ರಿಪ್ ಮಾಡಿದೆ ಹೇಳು?

ಸುಜಾತ : ಅಮ್ಮಾ ತಾಯೀ ವಿಮಲೂ, ನಾನು ಹೇಳೋದು ಸ್ವಲ್ಪ ಕೇಳ್ತೀಯಾ? ನನಗೆ ಮಾತಾಡೊಕ್ಕೇ ಬಿಡ್ತಿಲ್ಲ ನೀನು. ಪಮ್ಮಿ ಬೆಂಗಳೂರಿಗೆ ಬಂದಾಗ ಅವಳ ಮನೇಲಿ ತರಕಾರಿ ಎಲ್ಲಾ ಖಾಲಿ ಆಗಿತ್ತು ಅಂತ ಮಾರನೇ ದಿನ ಬೆಳಿಗ್ಗೆ ತರಕಾರಿ ತೊಗೋಳಕ್ಕೆ ಇಲ್ಲೇ ಸ್ಮಾರ್ಟ್ ಅಂಗಡಿಗೆ ಹೋದಳು–

ವಿಮಲ : ಅಲ್ಲೇನಾ ಅವಳಿಗೆ ಇ–ಮೇಲ್ ಮೆಸ್ಸೇಜ್ ಬಂದದ್ದು?

ಸುಜಾತ : ನಿನ್ನ ತಲೆ! ಇ–ಮೇಲ್ ಮೆಸ್ಸೇಜೂ ಬರಲಿಲ್ಲ. ಏನೂ ಇಲ್ಲ. ಅಲ್ಲಿ ಅಂಗಡಿಯವನು ಅವಳಿಗೆ ಒಂದು ಲಕ್ಕಿ ಕೂಪನ್ ಕೊಟ್ಟ. ಮೇಡಂ, ಇನ್ನು ಹತ್ತು ನಿಮಿಷಗಳಲ್ಲಿ ಕೂಪನ್ ಡ್ರಾ ಮಾಡ್ತೀವಿ. ನಿಮ್ಮ ನಂಬರ್ ಗೆದ್ದರೆ ನೀವು ಅದೃಷ್ಟವಂತರಾಗ್ತೀರಿ ಅಂತ ಅಂದ. ಸರಿ, ಕಾದು ನಿಂತಳು. ಡ್ರಾ ಆಯ್ತು! ಇವಳಿಗೇ ಮೊದಲನೇ ಪ್ರೈಝು!

ವಿಮಲ : ಏನೇ ಅದು ಸುಜೀ...?

ಸುಜಾತ : ಅಷ್ಟು ಹೊತ್ತಿನಿಂದ ಅದೇ ಹೇಳೋಕ್ಕೆ ಹೊರಟಿದ್ದೆ. ನೀನೆಲ್ಲಿ ಕೇಳಿಸ್ಕೋತಿಯಾ? ಅವಳಿಗೆ ಏನು ಸಿಕ್ತು ಗೊತ್ತಾ? ಒಂದು ಕೆಜಿ–

ವಿಮಲ : ಚಿನ್ನ ಅಲ್ಲ ತಾನೆ?

ಸುಜಾತ : ನಿನ್ನ ತಲೆ! ಒಂದು ಕೆಜಿ ಈರುಳ್ಳಿ ಆಲೂಗಡ್ಡೆ ಮಿಕ್ಸು! ತೊಗೊಂಡು ಗಂಡನಿಗೆ ಮಸಾಲೆ ದೋಸೆ ಪಲ್ಯ ಮಾಡಿಕೊಡ್ತೇನಿ ಅಂತ ಎಷ್ಟು ಸಂತೋಷವಾಗಿ ಹೋದ್ಲು ಅಂತ ಹೇಳೋಕ್ಕೆ ನಿನಗೆ ಫೋನ್ ಮಾಡ್ದೆ. ನೀನು ಚಿನ್ನದ ಜ್ವರದಲ್ಲಿ ಬಾಯಿಗೆ ಬಂದಹಾಗೆ ಮಾತಿಗೆ ಇಳಿದೆ. ಲೇ ವಿಮಲೂ ಏನಾಯ್ತೇ..? ಫೋನ್ ಇಟ್ಬುಟ್ಯಾ? ಹಲೋ! ಹಲೋ!! ಸರಿಹೋಯ್ತು ಬಿಡು!

☆

# ಕನ್ನಡ ಟಿವಿ ಸೀರಿಯಲ್‌ಗಳು ಹಾಗೂ ಶಕುನಗಳು

**- ವೈ.ಎನ್. ಗುಂಡೂರಾವ್**

**ಅ**ದ್ಯಾವ ಮಹಾಶಯ ಯಾವ ಸಂದರ್ಭದಲ್ಲಿ ಟಿವಿಯನ್ನು ಮೂರ್ಖರ ಪೆಟ್ಟಿಗೆ ಎಂದು ಕರೆದನೋ ಅಕ್ಷರಶಃ ಇದು ಸತ್ಯ. ಓಹೋ! ಇದು ಅರ್ಥವಾಗಲು ಇಷ್ಟು ವರುಷ ಬೇಕಾಯಿತೇ ಎನ್ನಬಹುದು ನೀವು. ಆದರೆ ಈ ಲೇಖನ ಓದಿದ ನಂತರ ನೀವೂ ಕೂಡಾ ಹೌದಲ್ಲ ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತೀರಾ ಜೋರಾಗಿ ಹೇಳಿದರೆ ಒಪ್ಪಿಕೊಂಡಂತಾಗುತ್ತದಲ್ಲ ಅದಕ್ಕೆ!

ಮೂರ್ಖರ ಪೆಟ್ಟಿಗೆಯಿಂದಾಚೆಗೂ ಒಳ್ಳೆಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿಲ್ಲವೇ? ಸೈನ್ಸ್ ಚಾನಲ್‌ಗಳು, ಜಿಯಾಗ್ರಫಿ ಚಾನಲ್‌ಗಳು, ಶೈಕ್ಷಣಿಕ ಚಾನಲ್‌ಗಳು ಹೀಗೆ ಹಲವಾರು ಚಾನಲ್‌ಗಳು ಇವೆ. ಅವೆಲ್ಲ ನಿಮ್ಮ ಕಣ್ಣಿಗೆ ಬೀಳಲಿಲ್ಲವೇ? ನಿಮ್ಮ ಮೂರ್ಖತನಕ್ಕೆ ಸರಿಯಾದ ಚಾನಲ್‌ನ್ನು ನೀವೇ ಆರಿಸಿಕೊಳ್ಳುತ್ತಿರುವಾಗ ಮೂರ್ಖರ ಪೆಟ್ಟಿಗೆ ಎಂದು ಜರೆಯುವುದರಲ್ಲಿ ಅರ್ಥವಿಲ್ಲವೆಂದು ನೀವು ವಾದಿಸಬಹುದು.

ಇರಿ, ಇರಿ ಸ್ವಲ್ಪ, ಆದರೆ ಈ ಚಾನಲ್‌ಗಳು ಎಷ್ಟು ಜನಕ್ಕೆ ತಲುಪಿತು, ಎಷ್ಟು ಹೊತ್ತು ಈ ಚಾನಲ್‌ಗಳನ್ನೇ ನೋಡುತ್ತಾ ಕೂಡಲಾದೀತು? ಹೇಳಿ – ಕೇಳಿ ಇದು ಮನರಂಜನೆಯ ಕಾಲ. ದುಡಿದು ಬಂದ ಮನಸನ್ನು ಹಗುರಗೊಳಿಸುತ್ತದೆಂಬ ಭರವಸೆಯಿಂದ ತಾನೇ ಚಾನಲ್‌ಗಳ ಗುಂಡಿಗಳನ್ನು ಒತ್ತುತ್ತಾ ಹೋಗುವುದು. ಯಾವ ಗುಂಡಿ ಒತ್ತಿದರೂ ಅದೇ ಹಾಡು – ಅದೇ ಕುಣಿತ. ಕೆಲವು ಚಾನಲ್‌ಗಳಲ್ಲಂತು ನಿಮ್ಮನ್ನು ನಗಿಸುತ್ತೇವೆಂದು ಹೋಗಿ ನಗೆಪಾಟಲಿಗೀಡಾಗುವುದೇ ಹೆಚ್ಚು. ಅಲ್ಲಿನ ಸಾಂದರ್ಭಿಕ ಹಾಸ್ಯದಿಂದ ನಗೆ ತರಿಸುವುದಕ್ಕಿಂತ ಆಭಾಸವಾಗುವ ಸಂದರ್ಭಗಳನ್ನು ನೋಡಿ ನಗಬೇಕಷ್ಟೆ.

ಟಿವಿ ಶೂಟಿಂಗ್ ಸಮಯದಲ್ಲಿ ನಡೆದ ಒಂದು ಸ್ವಾರಸ್ಯಕರವಾದ ಘಟನೆಯನ್ನು ನಿಮ್ಮ ಮುಂದಿಡುತ್ತೇನೆ. ಒಂದು ರೀತಿ ಆಫ್ ದಿ ರೆಕಾರ್ಡ್ ಅಂತಾರಲ್ಲ ಹಾಗೆ. ಓದಿ ನಕ್ಕೂ ಸುಮ್ಮನಿದ್ದುಬಿಡಿ. ಆದರೆ ಯಾರಿಗೂ ಹೇಳಬೇಡಿ.

ಪ್ರತಿಷ್ಠಿತರ ಮನೆಯಲ್ಲೊಂದು ಕಳ್ಳತನವಾಗಿರುತ್ತದೆ, ಇನ್‌ಸ್ಪೆಕ್ಟರ್ ಎಷ್ಟೇ ಪ್ರಯತ್ನಪಟ್ಟರೂ ಕಳ್ಳನನ್ನು ಪತ್ತೆ ಹಚ್ಚಲಾಗಿರುವುದಿಲ್ಲ. ಕಡೆಗೆ ಎಸಿಪಿ ಸಾಹೇಬರು ಇನ್‌ಸ್ಪೆಕ್ಟರನ್ನು ಛೇಂಬರಿಗೆ ಕರೆಸಿಕೊಂಡು ಸ್ವಲ್ಪವಾದ್ರೂ ಸೆನ್ಸ್ ಬೇಡ್ವೇನ್ರೀ ನಿಮ್ಗೆ. ಇಷ್ಟು ಸಣ್ಣ ಕೇಸನ್ನು ಪತ್ತೆಮಾಡಲು ನಿಮ್ಮ ಕೈಲಾಗಲಿಲ್ವಾ, ಮೇಲಿಂದ ನನ್ಗೆ ಗುಮ್ತಾ ಇದ್ದಾರೆ.

ನೀವೆಂತ ಇನ್‌ಸ್ಪೆಕ್ಟರ್ ರೀ? ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ಎಸಿಪಿ ಸಾಹೇಬರು ಜಾಡಿಸುತ್ತಾರೆ.

ಈ ಸನ್ನಿವೇಶವನ್ನು ನಿರ್ದೇಶಕರು ಇನ್‌ಸ್ಪೆಕ್ಟರ್ ಪಾತ್ರ ಮಾಡಿದವನಿಗೆ ವಿವರಿಸುತ್ತಾರೆ. ಅದಕ್ಕೆ ಇನ್‌ಸ್ಪೆಕ್ಟರ್ ಪಾತ್ರ ಮಾಡಿದವನು ಏನು ಹೇಳಿದ ಗೊತ್ತೆ? ''ಸರ್, ಆ ಎಸಿಪಿ ಸಾಹೇಬರ ಪಾತ್ರ ಮಾಡುವವನ ಮುಖ ಕಂಡ್ರೆ ನನಗಾಗದು. ನಾನ್ಯಾಕೆ ಸಾರ್ ಅವನ ಕೈಲಿ ಹೀಗೆ ಬೈಸಿಕೊಳ್ಳಲಿ. ಬೇಕಾದ್ರೆ ಈ ಸಂದರ್ಭದಲ್ಲಿ ನಾನೇ ಎಸಿಪಿಯಾಗಿ ಬರ್ತೇನೆ. ಅವನೇ ಇನ್‌ಸ್ಪೆಕ್ಟರ್ ಪಾತ್ರ ಮಾಡಲಿ. ಆಗ ನೋಡಿ ಉಗಿದು ಉಪ್ಪಿನಕಾಯಿ ಹಾಕಿ ಬಿಡ್ತೇನೆ ಆ ಇನ್‌ಸ್ಪೆಕ್ಟರ್‌ಗೆ. ಬೇಕಾದ್ರೆ ಡೈಲಾಗ್ ಹೇಳೋಕೆ ನನ್ಗೆ ಬಿಟ್‌ಬಿಡಿ. ಅವನ ಮುಖದ ಮೇಲೆ ನೀರಿಳಿಯುವ ಹಾಗೆ ಗುಮ್‌ಬಿಡ್ತಿನಿ. ನ್ಯಾಚುರಲ್ಲಾಗೂ ಬರುತ್ತೆ. ಅವನನ್ನ ಬೈದ ತೃಪ್ತಿನೂ ನಂಗೆ ಸಿಗುತ್ತೆ. ಬೇಕಾದ್ರೆ ಮುಂದಿನ ಸೀನ್‌ನಲ್ಲಿ ನಾನೇ ಇನ್‌ಸ್ಪೆಕ್ಟರ್ ರೋಲ್ ಕೂಡಾ ಮಾಡಿಬಿಡ್ತೇನೆ, ಏನಂತೀರಾ?'' ಎಂದನಂತೆ.

ಇದನ್ನು ಕೇಳಿದ ಡೈರೆಕ್ಟರ್ ಮಹಾಶಯ ಹಣೆ ಚೆಚ್ಕೊಂಡು, ತಲೇನ ತೊಗೊಂಡ್ಹೋಗಿ ತೆಂಗಿನಮರಕ್ಕೆ ಗಟ್ಟಿಸಿಕೊಂಡ್ನಂತೆ. ಅದೇನ್ ಸಾವಿರ ಹೋಳಾಯ್ತೋ ಏನೋ ಪಾಪ!

ಹ್ಞಂ! ಚಾನಲ್‌ಗಳ ಗುಂಡಿ ಒತ್ತುತ್ತಿದ್ದುದರ ಬಗ್ಗೆ ಹೇಳುತ್ತಿದ್ದೆ ಅಲ್ಲವಾ? ಯಾವ ಭಾಷೆಯ ಚಾನಲ್‌ಗಳ ಗುಂಡಿ ಒತ್ತಿದರೂ ಅಷ್ಟೆ. ಒಂದು ಭಾಷೆಯ ಕತೆಯು ಇನ್ನೊಂದು ಭಾಷೆಯ ಕತೆಯ ಪಳೆಯುಳಿಕೆಯಷ್ಟೆ. ಅದೇ ಸಂಸಾರದ ಕಥೆ, ಅದೇ ಗೋಳು, ಅದೇ ಮನೆಯೊಡತಿಯ ಹೂಂಕಾರ ! ನೀವು ಏನಾಯ್ತು ನಿನ್ನೆ ದಿನದ ಸೀರಿಯಲ್ ನೋಡ್ಲೆ ಇಲ್ವಲ್ಲ ಅಂದು ಕೊಳ್ಳುತ್ತಿದ್ದಂತೆ ಓ ಅಂದ್ರೆ ಠೋ ಅನ್ನೋಕೆ ಬಾರದ ಮನೆಯೊಡತಿ ಆಫಿಸಿಗೆ ನುಗ್ಗಿ ಸಿಇಒ ಕುರ್ಚಿಯಲ್ಲಿ ವಿಜೃಂಭಿಸಿರುತ್ತಾಳೆ. ಅಕಟಕಟಾ! ಎಂದಿರಾ. ಇಲ್ಲಿ ನಾಯಿಪಾಡು ಅನುಭವಿಸುವವನು ಪ್ರೇಕ್ಷಕನೇ! ಪಾಪ, ನಾಯಿಪಾಡು ಅಂತ ಹೇಳಿ ನಾಯಿಗೆ ಅವಮಾನಮಾಡಿಬಿಟ್ಟೆ, ಅದು ಸುಖವಾಗೇ ಇದೆ, ಹೋಗ್ಲಿಬಿಡಿ.

ಇನ್ನೂ 'ಇಬ್ಬರ್ಹೆಂಡಿರ ಸುಖವ ಕಂಡೆನಯ್ಯಾ ಇಂದು....' ಎಂದು ದಾಸರು ಹಾಡಿಲ್ಲವೇ? ಮತ್ತೆ ದಾಸವಾಣಿಯನ್ನು ನಾವೆಲ್ಲರೂ ಪಾಲಿಸುವುದು ಬೇಡವೇ? ಕನ್ನಡದ ಯಾವುದೇ ಧಾರಾವಾಹಿಯನ್ನು ತೆಗೆದುಕೊಂಡರು (ಒಂದೆರಡರಲ್ಲಿ ವಿನಾಯಿತಿ ಇರಬಹುದೇನೋ) ಇಬ್ಬರು ಹೆಂಡಿರು. ಒಂದು ನಾಟಿಕೋಳಿ, ಮತ್ತೊಂದು ಸಿಟಿಕೋಳಿ. ಕೆಲವುಸಾರೆ ಮನೆಗೇ ಬಂದು ವಕ್ಕರಿಸಿದ ನಕಲಿ ಹೆಂಡತಿಕಾಟ, ಇಲ್ಲ ಲವರ್ ಮನೆಯೊಳಗೇ ಇದ್ದರೂ ಒಂದು ಸಾರೆಯೂ ಭೇಟಿಯಾಗದಂತಹ ಶತಮೂರ್ಖ ಸನ್ನಿವೇಶಗಳ ನಿರ್ಮಾಣ, ಇದರ ಜೊತೆಗೆ ಮಾಜಿ ಲವರ್‌ನಿಂದಾದ ಮಗುವಿಗಾಗಿ ಕಿತ್ತಾಟ. ಅಸಲಿ ಮಗು ಮತ್ತೊಂದಾದಾಗ ಇದ್ದರೂ ತಿಳಿದೂ ತಿಳಿಯದಂತಹ ಬ್ರಹ್ಮಾಂಡ ಸ್ಥಿತಪ್ರಜ್ಞ ಮನೆಯ ಯಜಮಾನ! 'ಭಪ್ಪರೆ ಮಗನೇ!' ಎಂದು ನಿರ್ದೇಶಕರಿಗೆ ಶಹಭಾಶ್‌ಗಿರಿ ಕೊಡಬೇಕಷ್ಟೆ.

ಸರಿ, ಹಿಗ್ಗಾಮುಗ್ಗ ರಬ್ಬರ್ ತರಹ ಧಾರಾವಾಹಿಗಳನ್ನು ಎಳೆದುಕೊಂಡು ಹೊರಟಾಗ ಸಂಸಾರದಲ್ಲಿ ಕೆಲಕಾಲ ಸಂತೋಷದ ಸಂದರ್ಭಗಳು ಸದ್ಯಬಂತಲ್ಲ ಎಂದು ನೀವು ಯಥಾಶಕ್ತಿ ಶೋಖಿಸಿ ನಿಟ್ಟುಸಿರು ಬಿಡುತ್ತೀರಿ. ಆಗ ನೋಡಿ ಶುರುವಾಗುತ್ತೆ ಅಪಶಕುನಗಳ ಕಾಟ. ಹೇಳಿ – ಕೇಳಿ ಮೌಢ್ಯಜಗತ್ತು. ಮೂಢ ನಂಬಿಕೆಗಳ ವಿರುದ್ಧ ನೀವೆಷ್ಟೇ ಹೋರಾಟ ನಡೆಸಿಕೊಂಡು ಬರುತ್ತಿದ್ದರೂ ಈ ಧಾರಾವಾಹಿಗಳೊಂದೊಂದು ಜ್ಞಾನಗಂಗೋತ್ರಿಗಳು ನೋಡುಗರ ಮನಸ್ಸಿನ ಮೇಲೆ ಎಂತಹ ಮೂಢನಂಬಿಕೆಗಳ ಬೀಜ ಬಿತ್ತುತ್ತದೆಂಬುದನ್ನು ವೀಕ್ಷಿಸಿ.

ಹೊಸದಾಗಿ ಮದುವೆಯಾಗಿ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬರುತ್ತಾನೆ. ಹುಡುಗನ ತಾಯಿಗೆ ಆರೋಗ್ಯ ಸರಿಯಿರುವುದಿಲ್ಲ. ಗಂಡ ಆಫೀಸಿಗೆ ತೆರಳಿದ ನಂತರ ಹೆಂಡತಿ, ಅತ್ತೆಗೆ ಕುಡಿಯಲು ಕೊಡಲು ಒಂದು ಲೋಟ ಹಾಲು ತರುತ್ತಾಳೆ. ಅತ್ತೆಗೆ ಕೊಡಲು ಹೋದಾಗ, ನಿಶ್ಯಕ್ತ ಅತ್ತೆ ಕೈಲಿ ಲೋಟ ಹಿಡಿಯುವ ಮೊದಲೇ ಢಮಾರ್ ಎಂದು ಕೆಳಗೆ ಬೀಳುತ್ತದೆ. 'ಹೊಸದಾಗಿ ಮದುವೆಯಾದ ಮಗ, ಮದುವೆಯನಂತರ ರಜೆಕಳೆದು ಮೊದಲದಿನ ಕಚೇರಿಗೆ ತೆರಳಿದ್ದಾನೆ. ಹಾಲಿನ ಲೋಟ ಕೆಳಗೆ ಬಿದ್ದು ಅಪಶಕುನವಾಗಿದೆ. ದಾರಿಯಲ್ಲಿ ಮಗನಿಗೆ ಏನಾಗುವುದೋ ಎಂದು ತಾಯಿಗೆ ಎದೆ ಹಾರತೊಡಗುತ್ತದೆ' ಸರಿಯಾಗಿ ಹೇಳಬೇಕೆಂದರೆ ಅತ್ತೆಯ ಕೈಗೆ ಸೊಸೆ ಹಾಲಿನ ಲೋಟವನ್ನು ಕೊಟ್ಟಿರುವುದೇ ಇಲ್ಲ, ಕೊಡುವುದಕ್ಕೆ ಮುಂಚೆಯೇ ಕೆಳಗೆ ಬೀಳಿಸಿರುತ್ತಾಳೆ ಸೊಸೆ. ಹೇಗಿದೆ ಮೂಢನಂಬಿಕೆಗೆ ಒತ್ತು ಕೊಡುವ ರೀತಿ –

ಇದಕ್ಕೆ ಸರಿಯಾಗಿ ಬೈಕ್‌ನಲ್ಲಿ ಆಫೀಸಿಗೆ ಹೋದ ಮಗ ಸಂಜೆ ಹಿಂದಿರುಗುವಾಗ ಹಣೆಯ ಮೇಲೊಂದು ಪ್ಲಸ್ ಮಾರ್ಕ್ ಬ್ಯಾಂಡೇಜ್ ಅಂಟಿಸಿಕೊಂಡು ಬಂದಿರುತ್ತಾನೆ. ಇದಕ್ಕೆ ಬದಲಾಗಿ ಮಗನಿಗೆ ಏನೂ ಆಗದೆ – ಇವೆಲ್ಲ ಮೂಢ ನಂಬಿಕೆ ಎಂದು ಬೋಧಿಸಲು, ಸುಖವಾಗಿ ಮನೆಗೆ ಹಿಂದಿರುಗುವಂತೆ ಮಾಡಿ, ಮೂಢ ನಂಬಿಕೆಯ ಬಗ್ಗೆ ಸಮಾಜಕ್ಕೆ ಎಂತಹ ಸಂದೇಶ ಕೊಡಬಹುದಿತ್ತು ಅಲ್ಲವಾ?

ಚಿಕ್ಕಮಗುವೊಂದು ಕಳೆದು ಹೋಗಿರುತ್ತದೆ. ತಾಯಿ ಹೃದಯ ಪರಿತಪಿಸುತ್ತದೆ. ತೆಂಗಿನಕಾಯಿ – ಹೂವಿನ ಬುಟ್ಟಿ ತೆಗೆದುಕೊಂಡು ದೇವಸ್ಥಾನಕ್ಕೆ ಹೊರಟಾಗ ಬುಟ್ಟಿ ಕೈ ಜಾರಿ ಬೀಳುತ್ತದೆ. ಮಗು ಸುಖವಾಗಿ ಹಿಂದಿರುಗಿ ಬರಲೆಂದು ಪ್ರಾರ್ಥಿಸಲು ದೇವಸ್ಥಾನಕ್ಕೆ ಹೊರಟಾಗಲೇ ಬುಟ್ಟಿಯು ಕೆಳಗೆ ಬಿದ್ದು ಅಪಶಕುನವಾಗಿ ಬಿಟ್ಟಿತಲ್ಲ! ಹಾಗಾದರೆ ಮಗು ಸಿಗುವುದಿಲ್ಲವೇ? ತಾಯಿಯ ಹೃದಯ ಬಡಿದುಕೊಂಡು ಹೈರಾಣವಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ದೇವಸ್ಥಾನಕ್ಕೆ ಹೋದಾಗ ಮಗು ಸಿಗುವಂತೆ ಮಾಡಿದ್ದರೆ...! ಮೂಢನಂಬಿಕೆಯ ವಿರುದ್ಧ ಎಂತಹ ಮೆಸೇಜ್ ಕೊಡಬಹುದಿತ್ತು, ಛೇ!

ಸೊಸೆ ತುಳಸಿ ಪೂಜೆಮಾಡಿ ಮನೆಯೊಳಗೆ ಬರುವಾಗ ಹೊಸಲು ಎಡವಿ ಅರಿಶಿಣ – ಕುಂಕುಮದ ಬಟ್ಟಲನ್ನು ಕೆಳಗೆ ಬೀಳಿಸಿಬಿಡುತ್ತಾಳೆ. ಅತ್ತೆ ಎಂಬ ಪ್ರಾಣಿ ಭೂತ ಹಿಡಿದವಳಂತೆ ಸೊಸೆಯನ್ನು ಹಿಗ್ಗಾಮುಗ್ಗ ತಾಡಿಸುತ್ತಾಳೆ.

ಇದಕ್ಕಿಂತ – ''ಚೆಲ್ಲಿದ್ದ ಅರಿಶಿಣ – ಕುಂಕುಮವನ್ನು ತೆಗೆಯತೊಡಗುತ್ತಾಳೆ, ತೆಗೆದು ಮೇಲೇಳುತ್ತಿದ್ದಂತೆ ಸೊಸೆಯ ತಂದೆ – ತಾಯಿಗಳು ಎರಡನೆಯ ಮಗಳ ಮದುವೆಗೆ ಕರೆಯಲು ಬರುತ್ತಾರೆ'' ಮೂಢ ನಂಬಿಕೆಯ ವಿರುದ್ಧ ಇದಕ್ಕಿಂತ ಸಂದೇಶ ಬೇಕೇ?

ಮೂಢನಂಬಿಕೆಗಳ ವಿರುದ್ಧ ಹೋರಾಡುವ ಇಂತಹ ಸನ್ನಿವೇಶಗಳನ್ನು ತುಂಬಿ ಧಾರಾವಾಹಿಯೊಂದನ್ನು ನಿರ್ದೇಶಿಸಬೇಕೆಂಬ ನನ್ನ ಕೈತುರಿಕೆ ಜಾಸ್ತಿಯಾಗುತ್ತಿದೆ, ಹಾಳಾದ್ದು – ನಿರ್ದೇಶಿಸಲು ನನ್ನನ್ನು ಯಾರೂ ಕರೆಯುತ್ತಲೇ ಇಲ್ಲವಲ್ಲ! ಅಥವಾ ಎಡ ಅಂಗೈ ತುರಿಕೆಯಾಗುತ್ತಿರುವುದು ಅಪಶಕುನದ ಸಂಕೇತವೇ?

☆

---

## ಉದ್ದುದ್ದುದ್ದುದ್ದುದ್ದುದ್ದದ ಮಾತಿನವರು

ಕಂಡಳು ಸೀರಿಯಲ್ ನಟಿ
ಪಾರ್ಕಲಿ ಸೀರಿಯಲ್ ನಟನನ್ನು
ಉಕ್ಕಿತು ಮನದಲಿ ಆಸೆ
ಅಂದಳು ನಿಮ್ಮನ್ನು ತುಂಬಾ ನೋಡಿರುವೆ
ಗೊತ್ತಿಲ್ಲ ನಿಮ್ಮ ಹೆಸರೇನೆಂದು
ಹೇಳಿದ ಸೀರಿಯಲ್ ನಟ ಹೆಸರನು
ಬರೀ ತನ್ನ ಹೆಸರನ್ನಲ್ಲ
ತನ್ನ ಇಡೀ ತಲೆಮಾರಿನ ಹೆಸರುಗಳನು
ಹೇಳಿದಷ್ಟೂ ಮುಗಿಯದ ಹೆಸರುಗಳನು
ತೆಗೆದುಕೊಂಡು ಅರ್ಧ ಗಂಟೆಯನು
ಅಷ್ಟರಲ್ಲಿ ನಟಿಗೆ ಮರೆತೇಹೋಗಿತ್ತು
ನಾನು ಕೇಳಿದ್ದು ಏನನ್ನು ಇವನನು
ನಕ್ಕಳು ಈತ ಉದ್ದ ಮಾತಿನವನು
ಬೇಡ ಇವನು ಬದುಕಿನ ಜೊತೆಗೆ
ತರುಣಿಯಾದಾಗ ಕೇಳಿದ ನೆಕ್ಲೇಸನು
ತಂದುಕೊಟ್ಟಾನು
ಮದುಕಿಯಾಗಿ ಹಾಕಿರಲು ಕನ್ನಡಕವನು

*ಸುಕೇಶವ*

# Advertisement

# Advertisement

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ವಾಚ್ ಎಷ್ಟು ದುಬಾರಿ ಆದರೇನು.. ಟೈಂ ಸರಿಯಾಗಿರಬೇಕು... ಟೈಂ ಸರಿಯಾಗಿರಬೇಕು ಎಂದು ಸಿದ್ದರಾಮಯ್ಯನವರು ತಮಗೆ ತಾವೇ ಹೇಳಿಕೊಳ್ಳುತ್ತಿರಬಹುದೆ?
- ಊಟ ನಿದ್ದೆ ಬಿಟ್ಟು ಆರೋಗ್ಯ ಕೆಡಿಸಿಕೊಂಡು ಓದುವುದರಿಂದ ಹೆಚ್ಚು ಅಂಕ ಸಿಗಬಹುದೇ ಹೊರತು ಬುದ್ಧಿವಂತಿಕೆಯಲ್ಲ.
- ಹುಡುಗಿಯರು ಹುಡುಗರನ್ನು ಮೆಚ್ಚಿಸುವುದಕ್ಕಿಂತ ಹೆಚ್ಚಾಗಿ ಮತ್ತೊಂದು ಹುಡುಗಿಗೆ ಕಿರಿಕಿರಿ ಮಾಡಲೆಂದೇ ಚೆನ್ನಾಗಿ ಡ್ರೆಸ್ ಮಾಡಿಕೊಳ್ಳುತ್ತಾರೆ.
- ನೀನು ನನ್ನ ಸಲಹೆಯನ್ನು ತೆಗೆದುಕೊಳ್ಳಬಹುದು ಏಕೆಂದರೆ ನಾನದನ್ನು ಬಳಸುತ್ತಿಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಟೆಕ್ನಾಲಜಿ ಡಸ್ ನಾಟ್ ಮೇಕ್ ಅ ಫಿಲ್ಮ್, ಎ ಪರ್ಸನ್ ಡಸ್.
- ಬುದ್ಧಿಗೆ ಕೆಲಸ ಕೊಟ್ಟು ದುಡಿಯೋದು. ತಕ್ಷಣ ಕಾರು ಕೊಳ್ಳೋದು. ಅದರಲ್ಲಿ ಓಡಾಡಿ ಬೊಜ್ಜು ಬೆಳೆಸೋದು. ಬೊಜ್ಜು ಇಳಿಸೋದಿಕ್ಕೆ ಸೈಕಲ್ ಕೊಳ್ಳೋದು. ಮೊದಲೇ ಸೈಕಲ್ ಕೊಂಡಿದ್ದರೆ...?
- ನಾವೆಲ್ಲರೂ ಹುಟ್ಟುವಾಗ ಸಮಾನರೇ ಆದರೆ ಸಾಯುವಾಗ ಕೆಲವರು ಇತರರಿಗಿಂತ ಹೆಚ್ಚು ಶ್ರೀಮಂತರಾಗಿ ಸಾಯುತ್ತಾರೆ.
- ಕನ್ನಡಿಯೊಳಗಿನ ಪ್ರತಿಬಿಂಬವೇ ನಿಜವಾದ ನಾವು. ಕನ್ನಡಿಯೊಳಗಿನ ನಮ್ಮನ್ನು ಯಾರೂ ಏನೂ ಮಾಡಲಾರರು.
- ಚುಂಬನ: ಶಬ್ದಗಳು ಅನವಶ್ಯಕ ಎಂದಾಗ ಮಾತನ್ನು ನಿಲ್ಲಿಸಲು ಪ್ರಕೃತಿ ರೂಪಿಸಿರುವ ಮನಮೋಹಕ ಟ್ರಿಕ್.
- ಅತ್ಯಂತ ಮಹತ್ವದ ಯುರೇಕಾ ಕ್ಷಣ ಎಂದರೆ ನಿಮ್ಮನ್ನು ನೀವು ಅರಿಯುವ ಗಳಿಗೆ.
- ಸಿಟಿ - ಕಾಂಕ್ರೀಟ್ ಜಂಗಲ್ ಆರ್ ಹ್ಯೂಮನ್ ಜೂ?
- ಹೆಚ್ಚುತ್ತಿರುವ ವಿಚ್ಛೇದನಕ್ಕೆ ಕಾರಣ? ಬಹುಮಾನಿತ ಉತ್ತರ: ಮದುವೆ.
- ವಾಸ್ ದಿ ಪಾಸ್ಟ್ ಎವರ್ ಪರ್ಫೆಕ್ಟ್?
- ಹೋಂ ಸೈನ್ಸ್ ಗ್ರಾಜುಯೇಟ್‌ನನ್ನು ಹೋಂ ಸೈಂಟಿಸ್ಟ್ ಎಂದೇಕೆ ಕರೆಯುವುದಿಲ್ಲ?
- ಮರ ಒಂದು ಸೈನಿಕ. ಅರಣ್ಯ ಒಂದು ಸೈನ್ಯ. ಈ ಸೈನ್ಯದ ವಿರುದ್ಧ ನಡೆಯುವ ಹೋರಾಟಗಳು ಸೋಲಲಿ ಎಂದು ನಾವೆಲ್ಲ ಆಶಿಸೋಣ.
- ನಿನ್ನ ತಪ್ಪುಗಳನ್ನು ಮನ್ನಿಸುತ್ತಾ ನಿನ್ನ ಯಶಸ್ಸಿಗೆ ಕರುಬದೇ ಇರುವನೇ ನಿಜವಾದ ಸ್ನೇಹಿತ.

ಶುಂಠಿ ಕಷಾಯ

# ಒಳನೋಟದ ಗುರುತು

**- ಬೇಲೂರು ರಾಮಮೂರ್ತಿ**

**ಬೆ**ಳಗ್ಗೆ 8 ಗಂಟೆಯಾಯಿತು ಎಂದರೆ ಆ ಬೀದಿಯಲ್ಲಿ ಶಿವಪ್ಪಾ ಕಾಯೋ ತಂದೆ ಮೂರು ಲೋಕ ಸ್ವಾಮೀ ದೇವ, ಹಸಿವೆಯನ್ನು ತಾಳಲಾರೆ ಕಾಪಾಡೆಯ ಎನ್ನುವ ಹಾಡು ಕೇಳಿಬರುತ್ತದೆ. ಅದು ಯಾರು ಹಾಡೋದು ಎಂದು ಆ ಬೀದಿಯವರಿಗೆಲ್ಲ ಗೊತ್ತು. ಈಗ ಸುಮಾರು ತಿಂಗಳುಗಳಿಂದ ಕಣ್ಣು ಕಾಣದವನೊಬ್ಬ ಈ ಹಾಡನ್ನು ಹಾಡಿಕೊಂಡು ಬೀದಿಯಲ್ಲಿ ಭಿಕ್ಷೆ ಬೇಡೋಕೆ ಬರ್‍ತಾನೆ. ಅವನ ಜೊತೆಯಲ್ಲಿ ಒಂದು ಸಣ್ಣ ಹುಡುಗ ದಾರಿ ತೋರೋಕೆ, ಜನಗಳು ಕೊಟ್ಟ ಅನ್ನ, ದುಡ್ಡು ಬಟ್ಟೆ ಇತ್ಯಾದಿಗಳನ್ನು ತಗೋಳೋಕೆ.

ಪ್ರತಿ ದಿನ ಅವನು ಭಿಕ್ಷೆಗೆ ಬರೋದಾದರೂ ಎಲ್ಲರ ಮನೆಯವರೂ ಏನಾದರೂ ಅವನಿಗೆ ಕೊಟ್ಟೇ ಕೊಡುತ್ತಾರೆ. ಹಾಗೆ ಕೆಲವರು ಒಂದೆರಡು ಪ್ರೀತಿಯ ಮಾತುಗಳನ್ನೂ ಆಡುತ್ತಾರೆ. ಕಣ್ಣು ಕಾಣದವನ ಹೆಸರು ಶಿಖಾಮಣಿ ಅಂತ. ಅವನಿಗೆ ಕಣ್ಣು ಕಾಣೋದಿಲ್ಲ ಎನ್ನೋದೊಂದನ್ನು ಬಿಟ್ಟರೆ ಮಿಕ್ಕ ವಿಚಾರಗಳಲ್ಲಿ ಅವನು ಬಹಳ ಸೂಕ್ಷ್ಮ. ತನ್ನ ಜೊತೆ ಇರುವ ಹುಡುಗನಿಂದ ತಾನು ಭಿಕ್ಷೆ ಬೇಡೋ ಮನೆಗಳ ಯಜಮಾನರ ಹೆಸರುಗಳನ್ನು ಕೇಳಿ ತಿಳಿದುಕೊಂಡಿದ್ದಾನೆ. ಮನೆ ಮುಂದೆ ಹೆಸರು ಕೆತ್ತಿಸಿರುತ್ತಾರೆ. ಅದರ ಆಧಾರದ ಮೇಲೆ ಹೆಸರು ಗುರುತು ಮಾಡಿಕೊಂಡು ಈ ಮನೆ ಯಜಮಾನರು ಶ್ರೀಕಂಠಯ್ಯನವರಿಗೆ ದೇವರು ಚೆನ್ನಾಗಿ ಇಟ್ಟಿರ್‍ಲಿ, ನಮ್ಮಂಥವರನ್ನೂ ಅವರು ಚೆನ್ನಾಗಿ ನೋಡ್ಕೊಳ್ಳಿ ಎನ್ನುತ್ತಾನೆ. ಲೋ ನೀನು ನೋಡಿದರೆ ಕಣ್ಣಿಲ್ಲದವನು ನನ್ನ ಹೆಸರು ನಿನಗೆ ಹೇಗೆ ಗೊತ್ತೋ ಅಂತ ಕೇಳಿದರೆ ನಿಮ್ಮ ಮನೆ ಮುಂದೆ ಭಿಕ್ಷೆಗೆ ನಿಂತಿದ್ದಾಗ ನೀವು ಅದ್ಯಾರ ಜೊತೆನೋ ಶ್ರೀಕಂಠಯ್ಯ ಹಿಯರ್ ಅಂತಿದ್ರಲ್ಲ ಅದು ಕೇಳಿ ನೆನಪು ಇಟ್ಕೊಂಡಿದ್ದೆ ಅನ್ನುತ್ತಾನೆ. ಹತ್ತು ಹೆಜ್ಜೆ ಇಟ್ಟರೆ ಗೋವಿಂದಯ್ಯನವರ ಮನೆ, ನಾಲ್ಕು ಹೆಜ್ಜೆ ಬಲಕ್ಕೆ ಇಟ್ಟರೆ ಶ್ರೀಮತಿ ಮನೆ, ಆರು ಹೆಜ್ಜೆ ಬಲಕ್ಕೆ ಇಟ್ಟು ಎಡಕ್ಕೆ ತಿರುಗಿ ಮೂರು ಹೆಜ್ಜೆ ಇಟ್ಟರೆ ಕವಿತ ಅವರ ಮನೆ ಅಂತ ಅವನಿಗೆ ಗುರುತಾಗಿದೆ. ಅದು ಯಾವತ್ತೂ ಸುಳ್ಳಾಗಿಲ್ಲ. ಒಂದೊಂದು ದಿನ ಅಂತೂ ಅವರು ಭಿಕ್ಷೆ ತರುತ್ತಿರುವಾಗಲೇ ಓ ಇವರ ಮನೆಯಿಂದ ನೆನ್ನೆ ಮಾಡಿದ್ದ ಅವರೇಕಾಳು ಸಾರು ಅನ್ನ ಬರ್‍ತಿದೆ ಅಂತಾನೆ. ಹೀಗೆ ಭಿಕ್ಷೆ ಬೇಡಿದ ಅವನು ಮಧ್ಯಾಹ್ನ ದೇವಸ್ಥಾನದ ಎದುರಿಗಿರುವ ಮಂಟಪದಲ್ಲಿ ಠಿಕಾಣಿ ಹೂಡಿರುತ್ತಾನೆ. ಅಲ್ಲಿಯೂ ಅವನನ್ನು ಕೆಲವರು ನೋಡಿದ್ದಾರೆ. ಮನೆಯಲ್ಲಿ ಹಬ್ಬ ಇತ್ಯಾದಿ ಸಮಾರಂಭದಲ್ಲಿ ವಿಶೇಷ ತಿಂಡಿ ಮಾಡಿರುತ್ತಾರೆ. ಕೆಲವು ಮನೆಯವರು ಮಕ್ಕಳನ್ನು ಕರೆದು ಅವರ ಕೈಗೆ ತಿಂಡಿ ಕೊಟ್ಟು, ಹೋಗು ಆ ಶಿಖಾಮಣಿ ಮಂಟಪದಲ್ಲಿ ಕೂತಿರ್‍ತಾನೆ ಅವನಿಗೆ ಕೊಟ್ಟು ಬಾ ಅಂತ ಕಳಿಸುತ್ತಾರೆ. ಹೀಗಾಗಿ ಶಿಖಾಮಣಿ ಆ ಊರಿನಲ್ಲಿ ಎಲ್ಲರ ಕಣ್ಮಣಿ ಆಗಿದ್ದಾನೆ.

ಹೀಗೆ ನಿತ್ಯ ಕಾಯಕದಲ್ಲಿದ್ದ ಶಿಖಾಮಣಿ ಒಂದು ದಿನ ಎಂದಿನಂತೆ ಭಿಕ್ಷೆಗೆ ಬರುತ್ತಾ ತನ್ನ ಹಾಡನ್ನು ಹಾಡಿಕೊಂಡು ಬರುತ್ತಿದ್ದ. ದಾರೀಲಿ ಒಬ್ಬರು ಅವನ ಕೈಗೆ ಒಂದು ಹತ್ತು ರೂಪಾಯಿ ಹಾಕಿ ಏನಪ್ಪಾ ಎಷ್ಟೋ ತಿಂಗಳುಗಳಿಂದ ಇದೊಂದೇ ಹಾಡು ಹಾಡ್ತಾ ಇದೀಯಲ್ಲ ಈಗ ಹೊಸ ಹೊಸ ಹಾಡುಗಳು ಬಂದಿವೆ ಅವುಗಳನ್ನೂ ಒಂದಿಷ್ಟು ಕಲಿತುಕೋ ಎಂದರು. ಅದಕ್ಕೆ ಶಿಖಾಮಣಿ ಅಲ್ಲ ಸ್ವಾಮಿ ಈ ಹಾಡು ಎಷ್ಟೋ ವರ್ಷಗಳಿಂದ ನನಗೆ ಅನ್ನ ಬಟ್ಟೆ ಪ್ರೀತಿ ಕೊಡ್ತಾ ಇದೆ. ಈಗ ಅದನ್ನು ಸುಲಭವಾಗಿ ಬಿಟ್ಟುಬಿಡ್ಲಾ ಅಂತ ಕೇಳಿದ. ಹೀಗಾಗಿ ಆ ಬೀದಿಯವರಿಗೆ ಆ ಹಾಡು ಕೇಳೋದು ಅನಿವಾರ್ಯ.

ಎಂದಿನಂತೆ ಎಂಟು ಹೆಜ್ಜೆ ಬಲಕ್ಕೆ ಆರು ಹೆಜ್ಜೆ ಎಡಕ್ಕೆ ಹತ್ತು ಹೆಜ್ಜೆ ನೇರವಾಗಿ ಇಟ್ಟು ನಿಂತು ಅದೇ ಹಾಡನ್ನು ಹೇಳಿದ. ಅದು ಸುಬ್ಬರಾಯರ ಮನೆ. ಅವತ್ತು ಮನೇಲಿ ಸುಬ್ಬರಾಯರ ಧ್ವನಿ ಜೋರು ಜೋರಾಗಿ ಕೇಳುತ್ತಿತ್ತು. ಅವರ ಹೆಂಡತಿಯೂ ಮಾತಾಡ್ತಾ ಇದ್ದರು. ಜೊತೇಲಿದ್ದ ಹುಡುಗ ಇವತ್ತು ಈ ಮನೇಲಿ ಏನೋ ಜಗಳ ನಡೀತಾ ಇದೆ ನಡಿ ಮುಂದಿನ ಮನೆಗೆ ಹೊಗೋಣ ಅಂದ. ಅದಕ್ಕೆ ಶಿಖಾಮಣಿ ಇರು ಸ್ವಲ್ಪ ಅಂದು ಹಾಗೇ ನಿಂತ. ಸುಬ್ಬರಾಯರು ಎತ್ತರದ ಧ್ವನಿಯಲ್ಲಿ ನಿನ್ನ ತಲೆ, ನನಗೇ ಎದುರುವಾದ ಮಾಡ್ತಾ ಇದೀಯ, ಯಾವ ವಸ್ತೂನೂ ಇಟ್ಟ ಕಡೆ ಇರೋಲ್ಲ. ನೋಡ್ಕೊಳೋಕೆ ಆಗಲ್ವಾ ಅಂತ ಕೂಗಿದರೆ ಅವರ ಹೆಂಡತಿ ನೀವು ಅದನ್ನು ನನ್ನ ಕೈಗೆ ಕೊಟ್ರಾ, ನಾನೇ ಇಲ್ಲಿ ಇಟ್ಟಿರ್ತೀನಿ ಅಂದ್ರಿ. ನೀವು ಇಟ್ಟದ್ದನ್ನು ನೀವು ನೋಡ್ಕೊಬೇಕೇ ಹೊರತು ನನ್ನ ಕೇಳಿದರೆ ಹೇಗೆ ಅಂದು ಅವರ ಹೆಂಡತಿ ಕೂಗಾಡ್ತಾ ಇದ್ದರು. ಮನೆಯೊಳಗೆ ಗಲಾಟೆ ಜಾಸ್ತಿ ಇದ್ದಿದ್ರಿಂದ ಶಿಖಾಮಣಿ ಹಾಡು ನಿಲ್ಲಿಸಿದ. ಹೀಗೇ ಕೂಗಾಡಿಕೊಂಡು ಸುಬ್ಬರಾಯರು ಹೊರಗೆ ಬಂದಾಗ ಎದುರಿಗೆ ಶಿಖಾಮಣಿ ನಿಂತಿರೋದು ಕಾಣಿಸಿತು. ಇವನೊಬ್ಬ ಈಗಲೇ ಬರಬೇಕಾ ಅಂದ್ಕೊಂಡು ಅವನ ಕೈಗೆ ಹತ್ತು ರೂಪಾಯಿ ಹಾಕಿ ಒಳಗೆ ಹೋಗೋದ್ರಲ್ಲಿದ್ದರು. ಆಗ ಶಿಖಾಮಣಿ ಅಯ್ಯನೋರು ಇವತ್ತು ಯಾಕೋ ಮನಸ್ಸು ಕೆಡಿಸ್ಕೊಂಡಿದಾರೆ. ದೇವರ ಮೇಲೆ ಭಾರ ಹಾಕಿ ಸ್ವಾಮಿ ಎಲ್ಲಾ ಅವನು ನೋಡ್ಕೊತಾನೆ ಅಂದ. ಸುಬ್ಬರಾಯರು ಇವನತ್ರ ಏನು ಮಾತು ಅಂತ ಸುಮ್ಮನಿದ್ದರು. ಮತ್ತೆ ಶಿಖಾಮಣಿ ಅಯ್ಯಾವ್ರೆ ಯಾಕೆ ಇವತ್ತು ಅಮ್ಮಾವ್ರ ಮೇಲೂ ರೇಗ್ತಾ ಇದೀರ ಅಂತ ಕೇಳಿದ. ಸುಬ್ಬರಾಯರಿಗೆ ಅದೇನನಿಸಿತೋ ಮತ್ತೆ ಹಿಂದಕ್ಕೆ ಬಂದು ನೋಡು ಶಿಖಾಮಣಿ ಈ ಮನೇಲಿ ಯಾವ ವಸ್ತೂನೂ ಇಟ್ಟ ಕಡೆ ಇರೋಲ್ಲ. ನಾನು ಬೆಳಗ್ಗೆ ಆಫೀಸಿಗೆ ಹೋದರೆ ಸಂಜೆಗೆ ಬರೋದು. ಮನೇಲಿ ಇರೋಳು ಇವಳು. ಇವಳೇ ತಾನೇ ಎಲ್ಲಾ ನೋಡ್ಕೊಬೇಕು. ಈಗ ಕೇಳಿದ್ರೆ ನನಗೆ ಗೊತ್ತಿಲ್ಲ ಅಂತಾಳೇ. ನಾನು ಯಾರನ್ನ ಕೇಳಿ ಸಾಯ್ಲಿ ಹೇಳು ಅಂದರು. ಶಿಖಾಮಣಿ ಅಯ್ಯಾವ್ರೇ, ಗಾಬರಿ ಮಾಡ್ಕೊಬೇಡಿ, ಸಿಟ್ಟಾಗಬೇಡಿ ನಿಧಾನಕ್ಕೆ ಯೋಚಿಸಿ ಯಾವ ವಸ್ತು ಅದನ್ನು ಎಲ್ಲಿಟ್ಟಿದೀರ ಅಂತ ನಿಮಗೆ ನೆನಪಿಗೆ ಬಂದೇ ಬರುತ್ತೆ. ನೀವು ಯಾವ ವಸ್ತೂನ ಹುಡುಕ್ತಿದೀರ ಅಂತ ಕೇಳಿದ. ಸುಬ್ಬರಾಯರು ಇವನಿಗೆ ಯಾಕೆ ಅನ್ನೋದನ್ನೂ ಯೋಚಿಸದೆ ನೋಡು ಶಿಖಾಮಣಿ ಈಗ ಮೂರು ದಿವಸದ ಹಿಂದೆ

ಸಂಜೆ ಆಫೀಸಿಂದ ಬಂದಾಗ ಒಂದು ಲಕೋಟೆ ತಂದಿದ್ದೆ. ಅದರಲ್ಲಿ ಬಹಳ ಮುಖ್ಯವಾದ ಕಾಗದ ಪತ್ರಗಳೂ ದುಡ್ಡೂ ಎರಡೂ ಇತ್ತು. ಮನೆಗೆ ತಂದೆ. ಅದನ್ನೆ ಎಲ್ಲಿ ಇಟ್ಟೆ ಅಂತ ನೆನಪಿಗೇ ಬರ್ತಿಲ್ಲ. ಎಷ್ಟು ಹುಡುಕಿದ್ರೂ ಸಿಕ್ತಿಲ್ಲ. ಇವಳು ನನಗೆ ಸಹಾಯ ಮಾಡೋದು ಬಿಟ್ಟು ನನ್ನನ್ನೇ ದೂಷಿಸ್ತಿದಾಳೆ ಏನು ಮಾಡ್ಲೋ ಗೊತ್ತಾಗ್ತಿಲ್ಲ. ಶಿಖಾಮಣಿ ಅಯ್ಯಾವ್ರೇ ನಿಮ್ಮ ಮನೇಲಿ ಆಂಜನೇಯನ ಪಟ ಇದ್ಯಾ ಅಂತ ಕೇಳಿದ. ಸುಬ್ಬರಾಯರು ಇದೆ ಅಂದ್ರು. ಅದರ ಹಿಂದೆ ನೋಡಿ ನಿಮ್ಮ ಲಕೋಟೆ ಅಲ್ಲೇ ಇರುತ್ತೆ ಅಂದ. ಸುಬ್ಬರಾಯರು ಮಂತ್ರಮುಗ್ಧರಾದಂತೆ ಒಳಗೆ ಓಡಿ ಹೋಗಿ ಆಂಜನೇಯನ ಫೋಟೋ ಹಿಂದೆ ನೋಡಿದರೆ ಮುಂಡೇದು ಲಕೋಟೆ ಅಲ್ಲೇ ಇದೆ. ಅರೇ ಇದನ್ನು ಇಲ್ಲೇ ಇಟ್ಟು ಎಲ್ಲೆಲ್ಲಾ ಹುಡುಕಿದೆನಲ್ಲಾ ಅಂದುಕೊಳ್ಳುತ್ತಿರುವಾಗ ಅವರ ಹೆಂಡತಿ ಬಂದು ನೀವು ಎಲ್ಲೆಲ್ಲೋ ಇಟ್ಟುಬಿಡೋದು ಮತ್ತೆ ನನ್ನ ಮೇಲೆ ರೇಗೋದು ಇದೇ ಆಗೋಯ್ತು ನನಗೆ ನಿಮ್ಮನ್ನು ಕಟ್ಕೊಂಡಾಗಿನಿಂದ ಅಂತ ಗೊಣಗಿದ್ದೂ ಶಿಖಾಮಣಿಗೆ ಕೇಳಿಸಿತು. ಸುಬ್ಬರಾಯರಿಗೆ ಲಕೋಟೆ ಸಿಕ್ಕಿದ್ದು ಒಂದು ಸಂತಸವಾದರೆ ಇದು ಶಿಖಾಮಣಿಗೆ ಗೊತ್ತಾಗಿದ್ದು ಹೇಗೆ ಅಂತ ಆಶ್ಚರ್ಯ ಆಗಿ ಹೊರಗೆ ಓಡಿ ಬಂದರೆ ಶಿಖಾಮಣಿ ಇನ್ನೂ ಅಲ್ಲೇ ನಿಂತಿದ್ದ. ಅವನ ಹತ್ತಿರ ಬಂದು ಸುಬ್ಬರಾಯರು ಅಲ್ವೋ ಶಿಖಾಮಣಿ ನಿನಗೆ ಮೊದಲೇ ಕಣ್ಣಿಲ್ಲ ಆದರೆ ಈ ಲಕೋಟೆ ಆಂಜನೇಯನ ಫೋಟೋ ಹಿಂದೇನೇ ಇದೆ ಅಂತ ಅದು ಹ್ಯಾಗೋ ಹೇಳ್ದೆ ಅಂತ ಕೇಳಿದರು. ಶಿಖಾಮಣಿ ನಗುತ್ತಾ ಅಯ್ಯಾವ್ರೆ ದೊಡ್ಡೋರು ಒಂದು ಮಾತು ಹೇಳ್ತಾರೆ ಆ ಭಗವಂತ ಒಂದು ಕಿತ್ಕೊಳೋದೇ ಇನ್ನೊಂದು ಕೊಡೋದಕ್ಕಂತೆ ಹಾಗೆ ನನಗೆ ಕಣ್ಣು ಕಿತ್ಕೊಂಡ ಆದರೆ ಕಿವಿ ಚುರುಕು ಮಾಡಿದ. ಕಣ್ಣು ಮಾಡೋ ಕೆಲಸಾನ ಕಿವಿ ಮಾಡುತ್ತೆ. ಮೊನ್ನೆ ನಿಮ್ಮ ಮನೆಗೆ ಭಿಕ್ಷೆಗೆ ಬಂದಾಗ ನಾನು ಹಾಡು ಹೇಳ್ತಾ ಇರೋವಾಗ್ಲೂ ನೀವು ನಿಮ್ಮ ಹೆಂಡ್ತಿಗೆ ಲೇ ನೋಡೇ ಇದು ಬಹಳ ಮುಖ್ಯವಾದ ಲಕೋಟೆ ಇದನ್ನು ಆಂಜನೇಯನ ಫೋಟೋ ಹಿಂದೆ ಇಟ್ಟಿರ್ತೀನಿ ನಾನು ಮರೆತರೂ ನೀನು ಜ್ಞಾಪಿಸು ಅಂತ ಹೇಳ್ತಿದ್ದುದು ನನ್ನ ಕಿವಿಗೆ ಬಿದ್ದಿತ್ತು. ಅದು ಮರೆತಿರಲಿಲ್ಲ. ಅದು ಹೇಗೋ ನಿಮಗೂ ಅಮ್ಮಾವ್ರಿಗೂ ಮರೆತುಹೋಗಿತ್ತು. ನೀವು ಹುಡುಕ್ತಾ ಇರೋದು ಲಕೋಟೆ ಅನ್ನೋದು ಗೊತ್ತಾದ ಮೇಲೆ ಅದು ಅಲ್ಲೇ ಇರಬೇಕು ಅಂತ ಅನಿಸ್ತು. ನಾನು ಆಂಜನೇಯ ಹೇಗಿದ್ದಾನೆ ಅಂತ ನೋಡ್ದೋನೂ ಅಲ್ಲ, ಅವನ ಫೋಟೋ ಹೇಗಿರುತ್ತೆ ಅಂತ ನೋಡ್ದೋನೂ ಅಲ್ಲ, ಇನ್ನು ಲಕೋಟೆ ಅಂದ್ರೇನು ದುಡ್ಡು ಅಂದ್ರೇನು ಅನ್ನೋದೂ ಗೊತ್ತಿಲ್ಲ. ಆದರೆ ನಾನು ಕಿವೀಲಿ ಕೇಳಿದ್ದನ್ನು ನಿಮಗೆ ಹೇಳಿದೆ ಅಂದ. ಸುಬ್ಬರಾಯರಿಗೆ ತುಂಬಾ ಸಂತೋಷವಾಯಿತು. ನೀನು ನಾಳೆ ಬಾ ನಿನಗೆ ಹೊಸ ಬಟ್ಟೆ ತಂದಿರ್ತೀನಿ, ಸಿಹಿ ತಿಂಡೀನು ಮಾಡಿಸಿಟ್ಟಿರ್ತೀನಿ ಅಂದು ಒಳಗೆ ಹೋದಾಗ ಶಿಖಾಮಣಿ ತನ್ನ ಎಂದಿನ ಶಿವಪ್ಪಾ ಕಾಯೋ ತಂದೆ ಹಾಡುತ್ತಾ ಮುಂದಿನ ಮನೆಗೆ ಹೋದ.

☆

# ಹೊಸ ಬಿಸಿ

**- ವಸುಮತಿ ಉಡುಪ**

**ಘಂ**ಟೆ ಎಂಟಾದರೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ ವಿಘ್ನೇಶ. ಶರಾವತಿ ದೋಸೆ ಹಿಟ್ಟಿಗೆ ತಕ್ಕಷ್ಟು ಉಪ್ಪು, ಚಮಚ ಸಕ್ಕರೆ ಹಾಕಿ ಕದಡಿ, ಕಾವಲಿ ಒಲೆಯ ಮೇಲಿಟ್ಟು, ಮೇಲೆ ಮುಚ್ಚಳ ಮುಚ್ಚಿಟ್ಟು, ಖಾರಖಾರವಾಗಿ ಚಟ್ನಿ ತಿರುವಿಟ್ಟು, ಅವತ್ತಿನ ಸಾಪ್ತಾಹಿಕ ಪುರವಣಿ ಪೂರ್ತಿ ಓದಿ, ತನಗೆ ಗೊತ್ತಿದ್ದಷ್ಟು ಅರ್ಧಂಬರ್ಧ ಪದರಂಗ ಮಾಡಿ ಮುಗಿಸಿದರೂ ತಟ್ಟೀರಾಯನ ಹಾಗೆ ಉದ್ದಾನುದ್ದಕ್ಕೆ ಮಲಗಿದ್ದಾನೇ ವಿನಾ ಪತಿಪರಮೇಶ್ವರನಿಗೆ ಬೆಳಗಾಗುವ ಸೂಚನೆ ಕಾಣದೆ ಚಡಪಡಿಸಿದಳು ಶರಾವತಿ. ಭಾನುವಾರ ಅಂದರೆ ಹೀಗೇನೇ. ಯಾವ ಕೆಲಸವೂ ಸಮಯಕ್ಕೆ ಸರಿಯಾಗಿ ನಡೆಯುವುದಿಲ್ಲ. 'ಏನೀಗ? ರಜಾ ಅಲ್ವಾ?' ಧೋರಣೆ ಮಾತಾಡುತ್ತಾನೆ ವಿಘ್ನೇಶ. ಯಾರಿಗೆ ರಜಾ? ರಜಾ ಬಂತು ಅಂದರೆ ಮನೆಯೊಳಗೆ ದುಡಿಯುವ ಹೆಂಗಸರಿಗೆ, ವಾರವಿಡೀ ಹೊರಗೆ ದುಡಿಯುವ ಹೆಂಗಸರಿಗೂ ಕೂಡಾ ಕೆಲಸ ಜಾಸ್ತಿಯಾಗುವುದೇ ವಿನಾ ಕಮ್ಮಿಯಾಗುವುದೇ? ರಜಾ ಅಂದರೆ ವಿಘ್ನೇಶನಿಗೆ ಎಲ್ಲಿಲ್ಲದ ಸೋಮಾರಿತನ ಆವಾಹನೆಯಾಗಿಬಿಡುತ್ತದೆ. ಪುಣ್ಯಾತ್ಮರ ದೆಸೆಯಿಂದ ಕೆಲ ತಿಂಗಳು ಪಾದರಸದ ಹಾಗೆ ಚುರುಕಾಗಿದ್ದ. ಬೆಳಿಬೆಳಿಗ್ಗೆ ಐದೂವರೆಗೇ ಎದ್ದು, 'ಕಾಫಿ ಸಿಗುತ್ತೇನೇ?' ಎಂದು ಹೆಂಡತಿಯನ್ನು ಅಲುಗಾಡಿಸಿ ಎಬ್ಬಿಸಿ, 'ಫ್ರಿಜ್ಜಲ್ಲಿ ಹಾಲಿರುತ್ತೆ, ಫಿಲ್ಟರಲ್ಲಿ ಡಿಕಾಕ್ಷನ್ ಇರುತ್ತೆ, ಡಬ್ಬೀಲಿ ಸಕ್ಕರೆ ಇರುತ್ತೆ. ಕಾಫಿ ಮಾಡ್ಕೊಳ್ಳೋಕೆ ಬರಲ್ಲ ಅಂದ್ರೆ ಏನರ್ಥ?' ಧುಸುಮುಸು ಮಾಡುತ್ತಿದ್ದಳು ಶರಾವತಿ.

'ಹಾಗಲ್ವೇ, ಅದಕ್ಕೆಲ್ಲಾ ಒಂದು ಹದ ಅಂತಿರುತ್ತೆ. ನಿನ್ನ ಬಿಟ್ಟರೆ ಮತ್ಯಾರಿಗೂ ಆ ಹದ ಬರಲ್ಲ' ಪುಸಲಾವಣೆ ಮಾಡುತ್ತಿದ್ದ ಗಂಡಯ್ಯ. 'ಹೊಗಳಿಕೆಗೆ ಮರುಳಾಗಿ' ಅನ್ನುವಂತೆ ಶರಾವತಿ ಆಕಳಿಸುತ್ತಾ ಎದ್ದೇಳುತ್ತಿದ್ದಳು. ಬೇಗ ಏಳುವುದರಿಂದ ಬೇಗ ಮನೆಕೆಲಸ ಮುಗಿದು, ಒಂಭತ್ತು ಗಂಟೆಯ ಹೊತ್ತಿಗೆ ಗಂಡಹೆಂಡಿರು ತಲೆ ಕೆರೆದುಕೊಳ್ಳುತ್ತಾ ಅವತ್ತಿನ ಪತ್ರಿಕೆಯ ಪದರಂಗ ಬಿಡಿಸುತ್ತಿದ್ದುದೇ ಒಂದು ಚಂದ. ಗಂಡನಿಗಿಂತಾ ಮೊದಲು ತನಗೆ ಸೂಕ್ತ ಪದ ಹೊಳೆದರೆ ಶರಾವತಿಗೆ ಕೊಂಬು. ವಿಘ್ನೇಶನಿಗೆ ಪದಾಧಿದೇವತೆ ಸಾಕ್ಷಾತ್ಕಾರಳಾದರೆ ಅವನಿಗೆ ಜಂಭ. 'ಅಷ್ಟೂ ಗೊತ್ತಾಗಲ್ವೇನೇ? ದಡ್ಡಿ ದಡ್ಡಿ..' ಎನ್ನುವ ಛೇಡಿಕೆ. ತಾನು ಓದಿದ ಪುರವಣಿಯ ಕತೆಯನ್ನು ಸಂಕ್ಷಿಪ್ತವಾಗಿ ಗಂಡನ ಕಿವಿದೆರೆಗೆ ತಲುಪಿಸುತ್ತಿದ್ದಳು ಶರಾವತಿ. ತೀರಾ ರುಚಿಸಿದ ಭಾಗವನ್ನು ಹಾಗ್ಹಾಗೇ ಓದಿ ಹೇಳುತ್ತಿದ್ದಳು. ಮುದ್ದಣ, ಮನೋರಮೆ ಸುಳ್ಳು, ಇವರು ಸತ್ಯ. ಅಡಿಗೆಮನೆಯಲ್ಲಿ ತರಕಾರಿ ಹೆಚ್ಚಿಕೊಡುವುದೇನು, ಕಾಯಿ ತುರಿದುಕೊಡುವುದೇನು, ಮಸಾಲೆ ಅರೆದು ಕೊಡುವುದೇನು, ಬಿಡಿ ಕಳೆದ ಕಾಲವನ್ನು ನೆನೆನೆನೆದು ಹಳಹಳಿಸುತ್ತಾ ಕೂತರೆ ಫಲವೇನು? ದಿಢೀರ್ ಬದಲಾವಣೆಯಾಗಿದ್ದ ಗಂಡನ ನಡವಳಿಕೆಯನ್ನು ಸುಖಿಸುತ್ತಾ ಶರಾವತಿ ತೃಪ್ತಿಪಟ್ಟುಕೊಂಡಿದ್ದರೆ 'ನಾಯಿ ಬಾಲ ಡೊಂಕು' ಅನ್ನುವ ಹಾಗೆ ಮತ್ತೆ ಯಥಾಪ್ರಕಾರ.

‘ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತೆತ್ತಿ ಒಗೆದ’ ಕತೆ. ನಡುಮಧ್ಯೆ ಮಿಂಚಿನಂತೆ ಹೊಳೆದು ಕಣ್ಮರೆಯಾದ ಆ ಕಾಲ ಅಂದರೆ ಏಸೊಂದು ಸೊಗಸಿತ್ತು? ಮುದವಿತ್ತು? ಬೆಳಿಗ್ಗೆ ಐದೂವರೆಗೆ ಮನೆಯಿಂದ ಹೊರಟ ವಿಘ್ನೇಶ ಏಳೂವರೆಗೆ ಹಾಜರ್. ಸ್ನಾನ, ತಿಂಡಿ ಇತ್ಯಾದಿಗಳು ಸಮಯಕ್ಕೆ ಸರಿಯಾಗಿ ಚಕಾಚಕ್ ನಡೆದು ಹೋಗಿಬಿಡುತ್ತಿದ್ದುವು. ಸೂಕ್ತ ಸಮವಸ್ತ್ರಧಾರಿಯಾಗಿ ಮನೆಯಿಂದ ಹೊರಟು, ಸಮಾನಮನಸ್ಕರ ಗುಂಪನ್ನು ಸೇರಿಕೊಂಡು, ಕರ್ತವ್ಯ ನಿರ್ವಹಿಸುತ್ತಿದ್ದ ಗಂಡನನ್ನು ನೋಡುವುದೇ ಶರಾವತಿಗೆ ಒಂದು ಖುಷಿ, ಹೆಮ್ಮೆ. ಅತ್ತ ಪ್ಯಾಂಟೂ ಅಲ್ಲದ, ಇತ್ತ ಚಡ್ಡಿಯೂ ಅಲ್ಲದ, ಮೊಣಕಾಲಿಂದ ಕೆಳಗಿಳಿದ ಉದ್ದದ ಖಾಕಿ ಚಡ್ಡಿ, ಮೇಲೊಂದು ಟೀಶರ್ಟು, ಕಾಲಿಗೆ ಶೂಸು, ಕೈಯಲ್ಲಿ.., ಅವನ ಕಾರ್ಯಕ್ಷೇತ್ರಕ್ಕೆ ಅನುಗುಣವಾದ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿಸಲೇ ಎಂದು ಕೇಳಲು ಶರಾವತಿಯ ನಾಲಿಗೆ ತುರಿಸುತ್ತಿದ್ದರೂ ಹಾಗೆ ಕೇಳಲು ಹೋಗುತ್ತಿರಲಿಲ್ಲ ಶರಾವತಿ. ಗಂಟಲಲ್ಲಿದ್ದದ್ದು ಬಾಯಿಗೆ ಬರುತ್ತಿರಲಿಲ್ಲ. ಎಲ್ಲಾ ಒಟ್ಟು ಸೇರುವ ಒಂದು ನಿಗದಿತ ಸ್ಥಳ ಸೇರಿಕೊಳ್ಳುವವರೆಗೆ ಒಬ್ಬಂಟಿಯಾಗಿ ಹೋಗಬೇಕಾದ ಗಂಡ ಹಾಗೆ ಆಯುಧಪಾಣಿಯಾಗಿ ಹೋಗುವ ನೆನವರಿಕೆ ಶರಾವತಿಗೆ ಮುಜುಗರ ತರಿಸುತ್ತಿತ್ತು. ಆಗಲೇ ಆಡಿಕೊಳ್ಳುವ ಜನ, ಛೇಡಿಸುವ ಜನ, ತಂತಮ್ಮ ಬಾಲ ಬಿಚ್ಚಿಯಾಗಿತ್ತು. ‘ಇದೇನು ಹಣೇಬರ?’ ಎನ್ನುವಂತೆ ಎದುರುಮನೆಯ ಕೆಲಸದಾಕೆ ತನ್ನ ಹಣೆ ಮುಟ್ಟಿಕೊಂಡು ಮಾಡಿದ ಸಂಜ್ಞೆ ಶರಾವತಿಗೆ ಅರ್ಥವಾಗದೆ ಇಲ್ಲ. ಆಡುವ ಜನಕ್ಕೇನು, ಹೇಗಿದ್ದರೂ ಆಡಿಕೊಳ್ಳುತ್ತಾರೆ. ಒಂದು ಪೇಪರು ಓದುವುದಿಲ್ಲ, ನ್ಯೂಸ್ ಕೇಳುವುದಿಲ್ಲ, ಬರೀ ಧಾರಾವಾಹಿಗಳಲ್ಲೇ ಮೂರು ಹೊತ್ತೂ ಮುಳುಗೇಳುವವರಿಗೆ ಗಂಡನ ಘನಕಾರ್ಯ ಅರ್ಥವಾಗಬೇಕಾದರೂ ಹೇಗೆ? ಕೆಲ ಗಂಡಸರಿಗೆ ‘ಇವೆಲ್ಲಾ ಎಷ್ಟು ದಿನದ ಆಟ?’ ಅನ್ನುವಂತಾ ಕುತೂಹಲ, ವ್ಯಂಗ್ಯ. ಜನ ಮನಸ್ಸು ಮಾಡಿದರೆ ಏನೂ ಸಾಧಿಸಬಹುದು ಅನ್ನುವುದು ಇಂತವರ ತಲೆಗೆ ಹೊಳೆಯುವುದಿಲ್ಲ. ‘ತಾನು ಕಳ್ಳ, ಪರರ ನಂಬ’ ಅನ್ನುವ ಹಾಗೆ ತಾವೂ ಕೆಲಸಗಳ್ಳರು, ಶ್ರದ್ಧೆಯಿಂದ ಕೆಲಸ ಮಾಡುವವರ ಕುರಿತೂ ಅಪನಂಬಿಕೆ. ಗಂಡನನ್ನು ಯಾವತ್ತೂ ಒಪ್ಪಿಟ್ಟುಕೊಳ್ಳುವ ಸದ್ಗಹಿಣಿ ಶರಾವತಿ ತನ್ನ ಕಡೆಯಿಂದ ಅವನಿಗೆ ಪೂರಾ ಕುಮ್ಮಕ್ಕು ಕೊಟ್ಟಿದ್ದಳು. ಮೂರ್ನಾಲ್ಕು ತಿಂಗಳು ಎಲ್ಲಾ ಸುಗಮವಾಗಿ, ಸುಸೂತ್ರವಾಗಿ ನಡೆಯಿತು. ಇನ್ನೇನು ಸ್ವಚ್ಛ ಭಾರತ ಪ್ರಕಾಶಿಸತೊಡಗಿದಂತೆಯೇ ಅಂದುಕೊಳ್ಳುವಷ್ಟರಲ್ಲಿ ವಿಘ್ನೇಶನ ಹುಟ್ಟುಬುದ್ಧಿ ಮೇಲ್ಮೈ ಸಾಧಿಸಲು ತೊಡಗಿತಾ? ಶುದ್ಧೀಕರಣಕ್ಕೆ ಮೀಸಲಿಟ್ಟ ಶನಿ, ಭಾನುವಾರಗಳ ನಿಗದಿತ ಸಮಯ ಚುಟುಕಾಗತೊಡಗಿತು. ‘ಹೋದ ಪುಟ್ಟ, ಬಂದ ಪುಟ್ಟ’ ಅನ್ನುವ ಹಾಗೆ ಶರಾವತಿ ಹಲ್ಲುಜ್ಜಿ, ಮುಖಮಾರ್ಜನ ಮುಗಿಸುವುದರೊಳಗೆ ಗಂಡ ಹಾಜರ್. ‘ಇದೇನ್ರೀ, ಇಷ್ಟು ಬೇಗ?’ ಶರಾವತಿ ಹುಬ್ಬೇರಿಸುತ್ತಿದ್ದಳು.

‘ಆ ಅವರು ಬರಲಿಲ್ಲ, ಈ ಇವರು ಬರಲಿಲ್ಲ’ ಎಂದು ದೂಷಿಸುವ ಧಾಟಿಯಲ್ಲಿ ಹೇಳಿ ತಾನು ವಾಪಸಾದುದನ್ನು ಸಮರ್ಥಿಸಿಕೊಳ್ಳುತ್ತಿದ್ದ ವಿಘ್ನೇಶ. ಈಗ ಎರಡು ವಾರಗಳಿಂದ ನೆಪಕ್ಕೆ ಬೇಗೆದ್ದು ಆಚೆ ಹೋಗಿ ಬರುವುದೂ ಬಂದ್. ‘ನಾನೊಬ್ಬನೇ..’ ಅನ್ನುತ್ತಾನೆ

ವಿಘ್ನೇಶ. ಅಸಲು ವಿಷಯ ಯಾರಿಗೆ ಗೊತ್ತು? 'ಉಕ್ಕಿದ್ದು ಇಳಿಯಲೇಬೇಕು' ಅನ್ನುವ ನಿಯಮದಂತೆ ಎಲ್ಲರ ಉತ್ಸಾಹ ತಳಮುಟ್ಟಿದೆಯಾ?

ಶರಾವತಿ ಪೇಪರ್ ಮಡಿಚಿಟ್ಟು ಕೋಣೆಯೊಳಗೆ ಹಣಿಕಿದಳು. ಮಗ್ಗುಲಾಗಿ ಮಲಗಿದ್ದವನು ಕೌಂಚಿ ಮಲಗಿದ್ದ. ಅಷ್ಟೇ ವ್ಯತ್ಯಾಸ. ನೆರೆಮನೆಯಾಕೆ ಕಡ್ಡಿಪೊರಕೆಯಿಂದ ಪರಪರ ಮನೆಯೆದುರು ಗುಡಿಸುವ ಸದ್ದು ಕೇಳಿ ಅವಳೊಡನೆ ಲೋಕಾಭಿರಾಮದ ಎರಡು ಮಾತಾಡುವ ಉಮೇದಿನಿಂದ ಶರಾವತಿ ಮುಂಬಾಗಿಲು ತೆಗೆದುಕೊಂಡು ಗೇಟಿನ ಹತ್ತಿರ ಹೋಗಿ ನಿಂತಳು. 'ಆಯ್ತಾ ಕಾಫಿ?' ಸಸ್ನೇಹದ ನಗೆ ಚೆಲ್ಲಿ ವಿಚಾರಿಸಿಕೊಂಡಳು. ಬೆಳಗಿನ ಹೊತ್ತು ಪರಿಚಯಸ್ಥರು ಎದುರಾದರೆ ಹೀಗೇ ತಾನೇ ಮಾತು ಶುರುವಾಗುವುದು? ಯಾಕೋ ನೆರೆಮನೆಯವಳು ಸಲೀಸಾಗಿ ಮುಖ ಕೊಟ್ಟು ವ್ಯವಹರಿಸಲಿಲ್ಲ. ನಿರೀಕ್ಷೆಯಂತೆ, 'ಆಯ್ತು, ನಿಮ್ದಾಯ್ತಾ' ಎನ್ನುವ ಮುತ್ತು ಉದುರಿಸಲಿಲ್ಲ. ಮನೆಯೆದುರಿನ ಪ್ಲಾಸ್ಟಿಕ್ ಕಸವನ್ನು ಗುಡಿಸಿ ಆಚೆಮನೆಯ ಕಡೆ ಗುಡ್ಡೆ ಮಾಡಿದವಳು ಅದೊಂಥರಾ ಆಕ್ಷೇಪಣೆಯ ನೋಟದಿಂದ ಶರಾವತಿಯನ್ನು ನೋಡುತ್ತಾ ಕೇಳಿದಳು,

'ಯಜಮಾನ್ರು ಊರಲ್ಲಿಲ್ವಾ?'

'ಇದಾರಲ್ಲ? ಇನ್ನೂ ಬೆಳಗಾಗಿಲ್ಲ..' ಅಂದಳು ಶರಾವತಿ.

'ನೀವು ಎಬ್ಬಿಸ್ಬಾರ್ದಿತ್ತೇನ್ರೀ?' ಮತ್ತೊಂದು ಬಾಣ.

'ಯಾಕೆ?'

'ಬೆಳಗಾಗೋ ಹೊತ್ತಿಗೆ ಬೀದಿ ಲಕಲಕ ಅಂತಿತ್ತು. ಮನಸ್ಸಿಗೆ ಸಮಾಧಾನ ಆಗ್ತಿತ್ತು. ಈಗ ನೋಡಿ, ಮತ್ತೆ ಮೊದಲಿಂದೇ ಹಣೇಬರ. ಎಲ್ಲೆಲ್ಲಿಂದ್ಲೋ ಹಾರ್ಕೊಂಬರೋ ಕೆಟ್ಟಾಕೊಳಕು ಪ್ಲಾಸ್ಟಿಕ್ ಕಸ ಗುಡಿಸಿ ಚೊಕ್ಕ ಮಾಡೋ ಕರ್ಮ..'

ಉಗುಳು ನುಂಗಿದಳು ಶರಾವತಿ. ಅದೇನೋ ಗಾದೆ ಇದೆಯಲ್ಲ, 'ಮಾಡೋರೊಬ್ರಿದ್ರೆ ನೋಡು ನನ್ನ ಸಿರಿ' ಅಂತ. ಇವರೆಲ್ಲಾ ಏನೆಂದುಕೊಂಡಿದ್ದಾರೆ ವಿಘ್ನೇಶನನ್ನು? ತಾವಿರುವ ಪರಿಸರ ಸ್ವಚ್ಛವಾಗಿಡಬೇಕು ಅನ್ನುವುದು ಪ್ರತಿಯೊಬ್ಬರ ಅಂತರಾತ್ಮಕ್ಕೂ ಅನ್ನಿಸಬೇಕೇ ವಿನಾ ಕೆಲ ಉತ್ಸಾಹಿಗಳು ಮಾತ್ರಾ ಮೇಲೆ ಬಿದ್ದು ಹೋದರೆ ಪ್ರತಿಫಲ ಶೂನ್ಯ ಅನಿಸಿತು ಶರಾವತಿಗೆ. ಆ ಜ್ಞಾನೋದಯ ಆಗಿದ್ದರಿಂದಲೇ ವಿಘ್ನೇಶನಂತವರು ಹಿಂದೆ ಸರಿದದ್ದಾ? ಅಥವಾ ಹೊಸ ಬಿಸಿ ತಗ್ಗುತ್ತಾ ಹೋದದ್ದಾ? ಅಥವಾ....? ಉತ್ತರ ಹೊಳೆಯಲಿಲ್ಲ ಶರಾವತಿಗೆ. 'ಮೋಸ ಹೋಗುವವರಿದ್ದರೆ ಮೋಸ ಮಾಡುವವರೂ ಇರುತ್ತಾರೆ' ಅನ್ನುವುದು ಟೀವಿ ಚಾನಲ್ಲುಗಳಲ್ಲಿ ವಾರಕ್ಕೆ ಹತ್ತು ಸಲ ಚಲಾವಣೆಯಾಗುವ ಹಳಸಲು ವಾಕ್ಯ. ಅದರಂತೆಯೇ, 'ಕ್ಲೀನ್ ಮಾಡುವವರಿದ್ದರೆ ಕಸ ಹಾಕುವವರೂ..' ಶರಾವತಿ ನೊಣ ನುಂಗಿದವರಂತೆ ಮುಖ ಮಾಡಿಕೊಂಡು ಮನೆಯೊಳಗೆ ಹೊಕ್ಕಳು.

☆

# ಪ್ರೇಮಾಯಣ

- ಎಚ್.ಆರ್. ಹನುಮಂತ ರಾವ್

**ಶಿ**ಶಿರ ಋತುವಿನ ಕೊನೆಯ ಶನಿವಾರದ ಸಂಜೆ - ತಿಳಿ ನೀಲಿಯ ಆಗಸದಡಿ, ತಣ್ಣನೆಯ ಸುಳಿ ಗಾಳಿ ಬೀಸುವ ಸುಮಧುರ ಸಂಜೆ, ಸುತ್ತಲೆಲ್ಲಾ ಹರಡಿದ ನಿತ್ಯ ಹರಿದ್ವರ್ಣದ ಚಿಗುರಿನ ರಾಶಿ. ಜೊತೆಜೊತೆಗೆ, ಎಲ್ಲೆಲ್ಲೂ ಪಸರಿಸಿದ ಸಂಜೆ ಹೂಗಳ ಸುವಾಸನೆಯ ಕಂಪು, ದಣಿದ ದೇಹಕ್ಕೆ ನೆರವಾಗುವ ತಂಪು. ರಸಿಕರೆಲ್ಲರ ಮನ ತಿಳಿಗೊಳಿಸಿ, ಮುದಗೊಳಿಸುವ ನಯನ ಮನೋಹರವಾದ ಬಣ್ಣಬಣ್ಣದ ಪುಷ್ಪಗಳು, ನಿಧಾನವಾಗಿ ಮೂಡುತ್ತಿರುವ ಸಂಜೆ ಕತ್ತಲು - ಆನಂದ ವಿಹಾರ ಕ್ಲಬ್ಬಿನ ಸದಸ್ಯರ ಉತ್ಸಾಹವನ್ನು ಇಮ್ಮಡಿಗೊಳಿಸುವ ಪ್ರಕೃತಿಯ ಆವೇಶದ ವೇಳೆ. ಆಗಾಗ್ಗೆ ಬೌದ್ಧಿಕ ಚರ್ಚೆಗಳಿಗೆ, ಒಮ್ಮೊಮ್ಮೆ ತಿಳಿಹಾಸ್ಯದ ಹೊನಲುಗಳಿಗೆ, ಮತ್ತೊಮ್ಮೆ ಕೋಪ ತಾಪದ ಕಿಡಿನುಡಿಗಳ ಸಂಘರ್ಷಣೆಗೆ, ಆ ಉರಿಕಿಡಿಗಳ ಶಮನಕ್ಕಾಗಿ ಜನಿಸುವ ಸಿಹಿನುಡಿಗಳ ಮೇಲೋಗರಕ್ಕೆ, ಆಗಾಗ್ಗೆ ಪರಸ್ಪರ ಕಿಚಾಯಿಸಲು ನುಡಿವ ಅಣಿಮುತ್ತುಗಳಿಗೆ ಅಥವಾ ಮದಿರೆಯ ಪ್ರಭಾವದ ತೊದಲು ನುಡಿಗಳ ಸಿಂಚನಕ್ಕೆ ವೇದಿಕೆಯಾಗುವ ನಮ್ಮ ಆನಂದ ವಿಹಾರ ಕ್ಲಬ್ಬಿನ ಸಾಧಾರಣ ಪರಿಸ್ಥಿತಿಯ ಪಕ್ಷಿನೋಟವಿದು.

ರಾಮ ಮಂದಿರ ರಸ್ತೆಯನ್ನು ದಾಟಿ, ಸ್ವಲ್ಪ ದೂರ ಎಡಕ್ಕೆ ನಡೆದು, ಮತ್ತೆ ಬಲಕ್ಕೆ ತಿರುಗಿದರೆ, ಕಾಣಸಿಗುವ ಏಕೈಕ ಬಹು ಮಹಡಿ ಕಟ್ಟಡವೇ ಆನಂದ ವಿಹಾರ ಕ್ಲಬ್ಬಿನ ಆಶ್ರಯ ಧಾಮ ಮತ್ತು ನಿತ್ಯ ನೂತನ ಚಟುವಟಿಕೆಗಳಿಗೆ ಹಾಗೂ ಈ ವರದಿಗಳ ಉಗಮಕ್ಕೆ ಮೂಲ. ಮೊದಲ ಉಪ್ಪರಿಗೆಯ ಈಶಾನ್ಯ ದಿಕ್ಕಿಗಿರುವ ಪುಟ್ಟ ಹಜಾರವೇ ನಮ್ಮ ಚಿಟಿಕೆ ಸಂಘದವರ ಮನರಂಜನಾ ಕೇಂದ್ರ. ಶಂಕರ ಸಿದ್ಧಾಂತಿಗಳ ಪೀಠವೇ ವಿಶೇಷ ಕೇಂದ್ರ ಬಿಂದು. ಸಂಜೆ ಏಳಕ್ಕೆ ಸರಿಯಾಗಿ ಶಂಕರ ಸಿದ್ಧಾಂತಿಗಳ ಆಗಮನವಾಗುತ್ತಿದ್ದಂತೆ - ಸಮಯ ಪಾಲನೆಗೆ ಮತ್ತೊಂದು ಹೆಸರು 'ಸಿದ್ಧಾಂತಿ' - ಸಭೆಯಲ್ಲಿ ನಿಶ್ಶಬ್ದ ವಾತಾವರಣ. ಎಲ್ಲರ ಗಮನ ಅವರ ದಿಕ್ಕಿನೆಡೆಗೆ. ಮೇಜಿನ ಮೇಲೆ ಸುಲೋಚನವನ್ನಿಟ್ಟು, ಕೈ ಚೌಕದಲ್ಲಿ ಮುಖವನ್ನು ಒರಸಿಕೊಳ್ಳುತ್ತಾ, ಎಲ್ಲರ ಕಡೆಗೆ ದೇಶಾವರಿಯ ನಗೆ ಬೀರಿ, ಕುರ್ಚಿಯಲ್ಲಿ ಕೂರುತ್ತಿದ್ದಂತೆ, ಬೇರರ್ ವಾಸು ಮೇಜಿನ ಮೇಲೆ ಅವರ ಪ್ರಿಯವಾದ ಖಾದ್ಯ, ಪಾದ್ಯಗಳನ್ನಿಟ್ಟು ತುಸು ದೂರದಲ್ಲಿ ಕೈ ಕಟ್ಟಿ ನಿಲ್ಲುವವ. ಸಿದ್ಧಾಂತಿಗಳ ಮಾತೆಂದರೆ ಎಲ್ಲರಿಗೂ ಕುತೂಹಲ, ವಿಸ್ಮಯ, ಆಸಕ್ತಿ. ''ಸಭೆಯಲ್ಲಿ ಏನೋ ಗಹನವಾದ ಚರ್ಚೆಯಾಗುತ್ತಿರುವಂತಿದೆ, ವಿಷಯವೇನಿರಬಹುದು ರೇವಣಪ್ಪನವರೆ?'' ಸಿದ್ಧಾಂತಿಗಳು ಪ್ರಶ್ನಿಸಿದರು. ಸಭೆಯಲ್ಲಿ ಎಲ್ಲರಿಗೂ ಎದ್ದು ಕಾಣುವ ಹಾಗೆ, ತಮ್ಮ ಗಿರಿಜಾ ಮೀಸೆಯ ಜೊತೆಗೆ ದಷ್ಟ ಪುಷ್ಟ ಶಾರೀರದವರೆಂದರೆ ರೇವಣಪ್ಪನವರೊಬ್ಬರೆ.

''ನಮ್ಮ ತೇಂಬೆ (ಪಿ.ಐ. ಲಕ್ಷಣ ತೇಂಬೆ–ನಮಗೆಲ್ಲ 'ಪಿಲ್ಟು' – ವೃತ್ತಿಯಲ್ಲಿ ಕಂಪ್ಯೂಟರ್ ಇಂಜನೀರ್)ಯ ಸ್ನೇಹಿತ ರಾಮಾನುಜಂ ಪ್ರೀತಿ ಮಾಡೋಕ್ಕೆ ಬರದೆ ಅವಸ್ತೆ ಪಡೋದನ್ನ...''

''ಅರ್ಥವಾಯ್ತು ಬಿಡೀ, ರಾಮಾನುಜಂ ಸಮಸ್ಯೆ ನಮ್ಮ ಟೀವೀಎಸ್ ಪ್ರಸಾದ್ ಸಮಸ್ಯೆ ಎರಡೂ ಒಂದೇ. ಬಹಳಾನೆ ತೊಂದರೆ ಪಟ್ಟ. ಸ್ವಾರಸ್ಯವಾದ ಅನುಭವ ಅವನ್ದು. 'ನ ಭೂತೋ ನ ಭವಿಷ್ಯತಿ'ನ ಅನ್ನುವರಲ್ಲ, ಹಾಗೆ''.

''ಯಾರ್ ಸಾರ್ ಈ ಪ್ರಸಾದ್, ನಿಮ್ಮ ಬಂಧುಗಳಾ?'' ಪ್ರೊ. ಹಂಚಿಕಡ್ಡಿಯವರ ಪ್ರಶ್ನೆ.

''ಟಿವಿಎಸ್ ಕಂಪನಿ ಮಾಲಿಕರ ಬಂಧುವಿರಬೇಕು ಅಲ್ವೇ ಸಾರ್?'' ಪ್ರಶ್ನಿಸಿದರು ನಮ್ಮ ಕಪ್ಪಣ್ಣ.

''ಅಷ್ಟೂ ಗೊತ್ತಾಗಲ್ಲವೇನ್ರೀ, ಟಿವಿಎಸ್ ವೋ ಆದ್ಮೀಕ ಇನಿಷಿಯಲ್ ಸಿರ್ಫ್ ಹೋಗ. ಅದಕ್ಕೆ, ಟಿವಿಎಸ್ ಕಂಪನಿಗೂ ಸಿದ್ಧಾಂತಿಗಳಿಗೂ ಸಂಬಂಧ ಬನೇಗ ಕ್ಯಾ? ಪೀ.ಎಂ. ಎಂದಾಕ್ಷಣ ಪ್ರೈಂ ಮಿನಿಸ್ಟರು ಇಲ್ಲಾ ಪರ್ಸನಲ್ ಮೈಡು ಆಗ್ಬೋದು, ಎಳೆ ನಿಮ್ಬೇಕಾಯಿ!'' ಎಂದರು ಫೈಜ್ ಮೊಹಮದ್ ಪೀರ್ ಸಾಬು ತಮ್ಮ ಕಿರು ಮೀಸೆಯ ಮೇಲೆ ಕೈ ಇಟ್ಟು ಅವರನ್ನು ಕಿಚಾಯಿಸುತ್ತಾ.

''ಇಲ್ಲ, ಟೀವೀಎಸ್‌ಗು ಈತನಿಗೂ ಸಂಬಂಧ ಇಲ್ಲ. ಆದರೆ ನನಗೆ ದೂರದ ಬಂಧು. ಅಷ್ಟೇಯ. ನನ್ನ ಎರಡನೆ ಸೋದರ ಮಾವನ ಮೂರನೆ ಷಡ್ಡಕನ ಮಗ –– ತುರುವೇಕೆರೆ ವೇಂಕಟನಾಥ ಶ್ರೀನಿವಾಸ ಪ್ರಸಾದ, ಅರ್ಥಾತ್ ಟಿವಿಎಸ್ ಪ್ರಸಾದ. ಈತ ಎಷ್ಟೋ ಹುಡ್ಗೀರ್ನ ಇಷ್ಟ ಪಟ್ಟಿದ್ದುಂಟು. ಆದರೆ, ನೇರ ಯಾರನ್ನೂ ಮಾತಾಡ್ಸೋದಿರ್ಲಿ, ಅವರಾರೂ ಇವನ್ನ ಮಾತಾಡ್ಸಕೆ ಬಂದ್ರೆ, ಮೈಯೆಲ್ಲಾ ಒದ್ದೆ ಮಾಡ್ಕೊಂಡು ತಬ್ಬಿಬ್ಬಾಗಿ, ಮಾತಾಡಕ್ಕಾಗ್ದೆ ತೊದ್ಲುತ್ತಿದ್ದ. ಇಂಥವನೂ ಒಂದು ಪ್ರೇಮ ಪ್ರಕಣದಲ್ಲಿ ಸಿಕ್ಕು ಅವಸ್ತೆ ಪಟ್ಟಿದ್ದನ್ನ ನೀವು ಕೇಳಿದ್ರೆ ಏನಂತೀರೋ!''. ''ಐ ಫೀಲ್ ದೇರ್ ಮೇಬಿ ಮೆನಿ ಲೈಕ್ ದಟ್ ಈ ಇಪ್ಪತ್ತೊಂದನೇ ಸೆಂಚುರೀಲಿ ಕೂಡ. ಕ್ಯಾ ಪೀರ್ ಭಾಯ್?'' – ಇದು ನಮ್ಮ ಅಚ್ಚ ಕನ್ನಡಾಭಿಮಾನಿ, ಉಗ್ರ ಓರಾಟಗಾರ ಚಂದ್ರು ಅವರ ಉದ್ಗಾರ. ಇವರು ಮಾತು ಮಾತಿಗೂ 'ಕನ್ನಡ, ಕನ್ನಡ' ಅಂತ ಒದರ್ತಾ ಇರ್ತಾರೆ! ಗೋಕಾಕ್ ಅಂದ್ರೆ ಸಾಕು, 'ಕನ್ನಡ ಚಳುವಳಿಗೆ, ಅಣ್ಣಾವ್ರಿಗೆ ಜೈ' ಎನ್ನುತ್ತಾರೆ, ಆದ್ರೆ ಈಗ್ಲೂ ಗೋಕಾಕ ಎಲ್ಲಿದೆ, ಗೋಕಾಕರು ಯಾರು, ಏನಾಗಿದ್ರು, ಅವರ ಸಾಹಿತ್ಯ ಏನು ಅನ್ನೋದು ಅವ್ರಿಗೆ ಗೊತ್ತಿಲ್ಲ!

''ಅದೇನು ಸ್ವಲ್ಪ ವಿವರವಾಗಿ ಹೇಳ್ಬೋದಲ್ಲಾ ಶಂಕರ್?'' ನಿವೃತ್ತ ಸಬ್ ಜಡ್ಜ್ ವಾಸುದೇವ ಮೂರ್ತಿ ಉವಾಚ. ಸಿದ್ಧಾಂತಿಗಳು ಒಂದು ಗುಟಕನ್ನು ಏರಿಸಿ ''ಈ ಪ್ರಸಾದ ಸಾಗರದಲ್ಲಿ ಎಂ.ಬಿ.ಎ. ಮುಗಿಸಿ, ಪಿ.ಎಚ್.ಡಿ ಗಾಗಿ ದೊಡ್ಡ ಷಹರಿಗೆ ಬಂದವನು.

ನೋಡಿ, ಈ ಪೆಕರ ಒಂದಿನ ಸಿನೆಮಾಕ್ಕೆ ಹೋಗಿ ಬರೋವಾಗ ದಾರೀಲಿ ಒಂದು ಹುಡ್ಗೀನ ನೋಡ್ದ. ಆದರೆ ಅದೇ ವೇಳೆ ಯಾರೋ ಬಿಸಾಕಿದ್ದ್ ಬಾಳೆಹಣ್ಣು ಸಿಪ್ಪೆ ಮೇಲೆ ಕಾಲಿಟ್ಟು ಜಾರಿ ಬೀಳೋದ್ರಲ್ಲಿದ್ದ. ಅಷ್ಟರಲ್ಲಿ ಆ ಹುಡುಗಿ ಇವನ ಪಾಡು ನೋಡಿ ಸರಕ್ಕಂತ ಇವನ ಭುಜಕ್ಕೆ ಕೈ ಕೊಟ್ಟು ಅನಾಹುತ ತಪ್ಪಿಸಿದಳು.''

''ಅದೇ ಆಪ್ಕಾ ಮಹಾಭಾರತ್ ಮೇ ದಶ್ರಥ್ ಕ ತೀಸ್ರೀ ಬೀವಿ, ಷೂರ್ಪಾಂಖೀ ರಾಣಿ ಚಕ್ರಕ್ಕೆ ಹಾತ್ ದೇಕರ್ ಬಚಾವ್ ಮಾಡಿದ ತರಹ್ ಆಲ್ವಾ'' ಪೀರ್ ಉವಾಚ. ಕೈಕೇಯಿಯ ಜಾಗವನ್ನು ಪೀರ್ ಸಾಹೇಬರು ಶೂರ್ಪನಖಿಗೆ ಬಿಟ್ಟುಕೊಟ್ಟಿದ್ದರು. ವಿಶಾಲ ಹೃದಯಿ! ಅಲ್ಲದೆ, ಉರ್ದು ಮುಖೇನ ಬಯಲಾಗೋ ಅವ್ರ ಕನ್ನಡಾಭಿಮಾನ ಯಾವ ಓರಾಟಗಾರ್ನಿಗೂ ಕಮ್ಮಿ ಇಲ್ಲ. ''ಛೀ, ಸಾಹೇಬ, ಅದು ಮಹಾಭಾರತ ಅಲ್ರೀ, ರಾಮಾಯಣದಾಗ ಬರೋ ಸನ್ನಿವೇಶ, ನಿಮಗ ಪಾಠ ಮಾಡಿದವರಾದ್ರೂ ಯಾರಪ?'' ಪ್ರೊ. ಹಂಚಿಕಡ್ಡಿಯ ಉದ್ಗಾರ.

''ರಾತ್ರಿ ಎಲ್ಲ ರಾಮಾಯಣ ಕೇಳಿ, ಬೆಳಿಗ್ಗೆ ಎದ್ದು 'ರಾಮನ್ಗೂ, ಸೀತೆಗೂ ಏನ್ ಸಂಬಂಧ' ಅಂತಾ ಕೇಳಿದ್ರಂತೆ – ಅನ್ನೋ ಗಾದೆ ಪೀರೂ ಭಾಯ್ನ ನೋಡೇ ಕಟ್ಟಿರ್ಬೇಕು!'' ಅಂದರು ಎಎನ್ಕೆ ರೇಗುತ್ತಾ, ಸಾಹೇಬು ರಾಮಾಯಣ, ಮಹಾಭಾರತ ಎಲ್ಲವನ್ನೂ ಚೌಚೌ ಮಾಡಿದ್ದನ್ನ ಕೇಳಿ. ಪೀರ್ಸಾಬ್ಗೂ ಏಎನ್ಕೆಗೂ ಯಾವಾಗ್ಲೂ ಇದ್ದಿದ್ದೇ ಜಟಾಪಟಿ! ''ಈ ಪೀರ್ಸಾಬು ರಾಮಾಯಣ, ಮಹಾಭಾರತ ಎರಡನ್ನೂ ಅವರ ಮನೇ ಮಿಕ್ಸೀನಲ್ಲಿ ಹಾಕ್ಕೊಂಡು ಅರೆದು ನಮ್ಮತ್ರ ತರ್ತಾರೆ'' –– ಬಸವರಾಜಪ್ಪ ಉವಾಚ. ಪೀರ್ಗೂ ಕೋಪ ಉಕ್ಕಿತು ''ಐಸಾ ನಹೀ, ಮೇರಾ ಬೀವಿಕೊ ಬೆಹೆನ್ ಕಾ ಹಸ್ಬೆಂಡ್ ಬೀಏ ಗ್ರಾಜೇಟ, ಉನ್ಕಾ ಕನ್ನಡ್ಮೆ ಬೋಲ್ತೆ ಆಪ್ 'ಚಡ್ಡೀಕ' ಹೈನಾ, ರೇವಣಪ್ಪಾ? ಯೇ, ಕನ್ನಡ್ಮೆ ಬಹುತ್ ಪಡ್ಲಿಖಾ, ನನ್ವೈಫ್ಗೆ ಉನಕ ಬೆಹನ್ನೇ ಬೋಲೀ, ಅದ್ನ ನಾ ಹೇಳ್ತೀನಿ ಸಂರ್ಝೋ.'' ಯಾರೂ ಉತ್ತರಿಸಲಿಲ್ಲ. ಕನ್ನಡದ ಷಡ್ಕ ಇವರ ಬಾಯಲ್ಲಿ ಚಡ್ಡೀಕ ಆಗಿ, ಉರ್ದು ಮಿಶ್ರಿತ ಕನ್ನಡ ಹರ, ಹರಾ ಆಗಿತ್ತು!

''ಈ ಘಟನೆಯಿಂದ ಇಬ್ಬರಿಗೂ ಪರಿಚಯವಾಗಿದ್ದೇನೊ ನಿಜ'' ಮತ್ತೆ ಪ್ರಣಯಕ್ಕೆ ತಿರುಗಿದ್ದು ಮುಖಾಮುಖಿ ಭೇಟಿ ಆಕಸ್ಮಿಕವಾಗಿ ಯಾವುದೋ ಮದುವೆ ಮನೇಲಿ ಆಗಿದ್ದರಿಂದ. ಅದ್ರೆ ಅದನ್ನ ಕ್ಯಾಷ್ ಮಾಡ್ಕಳ್ಳೋಕು ಆಗದೆ, ಸುಮ್ನೆ ಇರಲೂ ಆಗದೆ ಸ್ನೇಹಿತರೊಡನೆ ತೋಡ್ಕೊಂಡಿದ್ದಷ್ಟೆ ಲಾಭ. ಸ್ನೇಹಿತರ ಬಿಟ್ಟಿ ಸಲಹೆಗಳೆಲ್ಲ ಇವನ ಪುಕ್ಲತನದಿಂದ ಪ್ರಯೋಜನವಾಗ್ಲಿಲ್ಲ.'' ಎಂದರು ಸಿದ್ಧಾಂತಿಗಳು.

''ಆಕೆ ಮನೇಗೆ ಹೋಗಿ ನೇರ ಅವ್ರ ಅಪ್ಪ, ಅಮ್ಮನ ಹತ್ರ ಕೇಳೋದ್ ತಾನೇ ಸಾರು? ನಾನಾಗಿದ್ರೆ, ಟೂ – ಟು – ಫೈವ್ ಬೆಟ್ಟಿಂಗ್ ಕಟ್ಟಿ, ಅವ್ಳು ಎಲ್ಲೇ ಇದ್ರೂ, ಅಕೆ ಕುತ್ಗೆಗೆ ತಾಳಿಕಟ್ಟಿ ಗೆಲ್ತಿದ್ದೆ.'' ಪರಮೇಶ್ವರಯ್ಯ ಪ್ರಶ್ನಿಸಿದ. ಈ ನಂ ಪರ್ಮೇಶಿಗೆ ರೇಸ್ ಕುದುರೆ ಬಾಲಕ್ಕೆ ಬಾಜಿ ಕಟ್ಟೋ ಹುಚ್ಚು. ಜಾಕ್ಪಾಟ್ ಹೊಡದದ್ದಂತೂ ಇಲ್ಲ. ಅದಕ್ಕೆ ಅವರ್ನ 'ಪಂಟರ್ ಪರಮೇಶಿ' ಅಂತ್ಲೇ ನಾವ್ಕರ್ಯೋದು.

‘‘ಹುಡುಗೀನ ಕಿಡ್ನಾಪ್ ಮಾಡಿ, ಪೋಲಿಸ್ನೆದುರಿಗೆ ಮ್ಯಾರೇಜ್ ಆಗಬಹುದಿತ್ತಲ್ಲ ಈ ಹುಳ?’’ ಚಂದ್ರು ಕೊಶ್ಚನಿಸಿದರು.

‘‘ಆಕೇ ಏನ ಮೈನರಲ್ಲ, ಹಾಗ್ಮಾಡಿದ್ರೆ ನೀವು ಪೋಲಿಸ್ನೋರ್ ಎದ್ರುಗೇ ಇರ್ತೀರ, ಆದ್ರೆ ಲಾಕಪ್ ಒಳಗೆ ಗೊತ್ತಾ? ಏನಂತಾರೆ ನ್ಯಾಯ ಮೂರ್ತಿಗಳು?’’ ಎಂದು ಪಿಲ್ಬುಚಂದ್ರ್ರಣನನ್ನು ಮೂದಲಿಸಿದರು. ಜಡ್ಜ್ ವಾಸುದೇವ ಏನೂ ಹೇಳದೆ ನಕ್ಕರಷ್ಟೆ.

‘‘ನೋಡಿ, ಇಲ್ಲಿ ಇನ್ನೊಂದ್ ಸಮಸ್ಯೆ ಅಂದ್ರೆ, ಇವಳು ಚಿಕ್ಕ ಮಗುವಾಗಿದ್ದಾಗಲೇ ಅಪ್ಪ ಅಮ್ಮ ಅಪಘಾತದಲ್ಲಿ ಸತ್ತು, ಅಜ್ಜಿಯ ಸುಫರ್ದಿಯಲ್ಲೇ ಬೆಳೆದವಳು. ಅವ್ರ ನೆರೆಹೊರೇಲಿ ‘ಅಮಲ್ದಾರ್ ರಂಗಮ್ಮ’ ಅಂತಲೇ ಫೇಮಸ್ಸು. ಈ ಅಜ್ಜಿ ಬಾಯಿ ಬೊಂಬಾಯಿ, ಅವ್ಳೆದ್ರುಗೆ ನಿಂತು ದಬಾಯ್ಸೋ ತಾಕತ್ತು ಯಾವ ಪೋಲಿಸ್ ಅಧಿಕಾರಿಗೂ ಇಲ್ಲ ಅಂತ ನೆರೆಹೊರೆಯವರೆ ಹೇಳ್ತಾರೆ. ಆಕೆಗೆ ಈ ಮಗಳ್ನ ಕೈ ಹಿಡಿಯೋವನು ಇಂಜನೀರೇ ಆಗಿರಬೇಕು, ಕಾರು, ಮನೆ ಹೊಂದಿರ್ಬೇಕು. ಮದುವೆಗೆ ಇರೋ ತಮ್ಮ, ತಂಗಿ ಇರ್ಬಾರ್ದು. ಮನೆ ಅಳಿಯನಾಗಕ್ಕೆ ಒಪ್ಕೊಬೇಕು. ಬೈಕ್ನಲ್ಲಿ ಕಾಲೇಜ್ಗೆ ಹೋಗ್ತಿದ್ದವ ನಮ್ಮ ಪ್ರಸಾದ್ ಹೇಗೆ ತಾನೇ ಇವಳ್ನ ಒಪ್ಪಿಸೋಕೆ ಆಗುತ್ತೆ? ಆದರೆ, ಎಂಬಿಯೇನ ಕೊನೆ ಸೆಮಿಸ್ಟರನಲ್ಲಿದ್ದ ಇವನಿಗೆ ಕ್ಯಾಂಪಸ್ ರಿಕ್ರೂಯೇಟ್ಮೆಂಟ್ನಲ್ಲಿ ಕೈ ತುಂಬ ಸಂಬಳ ತರುವ ಕೆಲಸ ಖಾತರಿಯಿದ್ದರೂ, ಮದುವೆಯಾದ ಮೇಲೆ ಅವ್ರ ಅಜ್ಜಿ ಜೊತೇಲೆ ಇರ್ಬೇಕು ಅನ್ನೋದು ಹೇಗೆ ಸಾಧ್ಯ? ತಬ್ಬಲಿಯಾಗುತ್ತಿದ್ದವಳನ್ನು ತಾತ ಶಂಕರಪ್ಪಾನೂ ಇಲ್ಲದ, ಅಜ್ಜಿಯೊಬ್ಬಳೆ ಆಕೆಯನ್ನು ಸಾಕಿದ್ದರ ಕಾರಣ ಈ ಕಂಡಿಶನ್. ‘‘ಮತ್ತೆ ಮದುವೆ ಡ್ರಾಪ ಸರ್?’’ (ಐವತ್ತರ ಆಜುಬಾಜು ಇದ್ದ ಬ್ಯಾಚುಲರ್ ಬಸವರಾಜ) ಆವೇಶದ ಪ್ರಶ್ನೆ.

‘‘ಇಲ್ಲ, ನಮ್ಮ ಪ್ರಸಾದನಿಗೆ ದಿನ ಪತ್ರಿಕೇಲಿ ಒಂದು ಜಾಹೀರಾತು ಈ ರೀತಿ ಕಣ್ಣಿಗೆ ಬಿತ್ತು:

ನಿಮ್ಮ ವಿವಾಹಕ್ಕೆ ಅಥವಾ ದಾಂಪತ್ಯದಲ್ಲಿ ಸಮಸ್ಯೆ ಉಂಟಾ?

ಅಥವಾ ಬಂಧು ಬಳಗದವರಿಂದ ಕಿರಿಕಿರಿ ಅನುಭವಿಸುತ್ತಿರುವಿರಾ? ಪರಿಸ್ಥಿತಿ ಕೈ ಮೀರುವ ಮುನ್ನ ಪರಿಹಾರ ಪಡೆದು ಸುಖ, ಸಂತೃಪ್ತ ಜೀವನ ನಡೆಸಿರಿ. ಇಗೋ ಎಲ್ಲಾ ಸಮಸ್ಯೆಗಳಿಗೆ ಇಲ್ಲಿದೆ ಪರಿಹಾರ. ಸಂತೃಪ್ತ ಜೀವನಕ್ಕೆ ಅದ್ಭುತವಾದ ವಶೀಕರಣ ಯಂತ್ರ ಇಂದೇ ಪಡೆದು ಜಯಶೀಲರಾಗಿ. ತ್ವರೆ ಮಾಡಿ, ಈ ದಿನವೇ ಸುದಿನ, ಸಂಪರ್ಕಿಸಿ -- ಕೇರಾಫ್ ‘‘ಕಹಿಸಿಹಿ’’, ಪೋಸ್ಟ್ ಬಾಕ್ಸ್ ಸಂ.111.’’

ಈ ಜಾಹೀರಾತು ನಮ್ಮ ಪ್ರಸಾದನಿಗೆ ‘ಮುಳುಗುತ್ತಿದ್ದವನಿಗೆ ಹುಲ್ಲುಕಡ್ಡಿಯ ಆಸರೆಯಂತೆ ತೋರಿತು. ಕೂಡಲೇ ಅವ್ನ ಸಮಸ್ಯೆಗಳನ್ನು ಬರೆದು, ಪರಿಹಾರವನ್ನು ಕೋರಿ, ಲಕೋಟೆಯಲ್ಲಿಟ್ಟು ಆ ದಿನವೇ ಅಂಚೆಗೆ ಹಾಕಿದ. ಇದಾದ ಹಲವು ವಾರಗಳು ನನ್ನ ವಿದೇಶ ಪ್ರಯಾಣದಿಂದಾಗಿ ಅವನ ಬಗ್ಗೆ ತಿಳಿಯಲಾಗಲಿಲ್ಲ. ನಾನು ಹಿಂತಿರುಗುವುದಕ್ಕೆ ಮುನ್ನಾ ದಿನ ಅವನಿಂದ ಮಿಂಚಂಚೆಯೊಂದು ಬಂತು, ಅದರಲ್ಲಿ

ಜಾಹಿರಾತು ಕೊಟ್ಟವನು ಢೋಂಗಿ ಎಂದೂ, ಅದೇ ರೀತಿ ಎಲ್ಲರಿಂದ ಹಣ ಪಡೆದು ಪಲಾಯನ ಮಾಡಿದನೆಂದು ವ್ಯಾಕುಲದಿಂದ ಬರೆದಿದ್ದ.''

''ಮತ್ತೆ? ಮದುವೆ ಮುರ್ದೇ ಹೋಯ್ತಾ?'' ಎಲ್ಲರೂ ಒಟ್ಟಿಗೇ ಕೂಗಿದರು.

''ಅಂಥಾ ಗಟ್ಟಿಗ್ರಾದರೆ, ಮದುವೆ ಒಪ್ಕೊಳ್ಳೋದೇ ಸರೀ ಅಲ್ಲ ಸಾರ್, ಹಣ ಹೋದ್ರೂ ಒಳ್ಳೇದೇ ಆಯ್ತು, 'ಕಿಕ್ ದಿ ಬಕೆಟ್ ಅಂತಾರಲ್ಲ ಹಾಗೆ' '' ಕಪ್ಪಣ್ಣ ಉದ್ಗರಿಸಿದರು.

''ಹಾಗಂದ್ರೆ, ಅರ್ಥಾನೇ ಬೇರೆ ಕಂಡ್ರಿ, ಸಾಹೇಬ್ರು ರಾಮಾಯಣ, ಭಾರತ, ಕನ್ನಡ, ಉರ್ದುನ ಎಲ್ಲಾನೂ ಒಟ್ಟಿಗೇ ಆಪೋಶನ ತಗಂಡ್ರೆ ಕಪ್ಪಣ್ಣ ಇಂಗ್ಲೀಷನೆ ಕೊಲೆ ಮಾಡಿಬಿಡ್ತಾರೆ!'' ಯಾವಾಗಲೂ ತಾಳ್ಮೆಯಿಂದಿರುವ ಪ್ರೊ. ಹಂಚಿಕಡ್ಡಿ ರೇಗಿದರು.

''ಹಾಗೇನೂ ಆಗಲಿಲ್ಲ'' ಸಿದ್ಧಾಂತಿಗಳು ಮುಂದುವರೆಸಿದರು ಗ್ಲಾಸನ್ನು ತುಟಿಗೇರಿಸುತ್ತಾ. ''ಅವನ ಅದೃಷ್ಟ ನೆಟ್ಟಗಿತ್ತು. ನಾನು ಮತ್ತೆ ಹಿಂತಿರುಗಿದ್ಮೇಲೆ, ಅವನ ಮದುವೆ ಸೆಟ್ಲಾಗಿ, ನಿಶ್ಚಿತಾರ್ಥ ನಾನೇ ಖುದ್ನಿಂತು, ಯಾವ ಅಭಾಸಕ್ಕೂ ಅವಕಾಶವಾಗ್ದಂತೆ ನಡೆಸಿಕೊಟ್ಟೆ''

''ಬಹುತ್ ಅಚ್ಛಾ ಹೋಗಯಾ, ಸಾಬ್, ಸಾರ್ಗೆ ಜೈಜೈ ಬೋಲೋ, ಏನ್ ಹೇಳ್ತೀರಾ ಎಳೆನಿಂಬೇಕಾಯವ್ರೆ? ನೀವಾಗಿದ್ರೆ ಅವ್ರ ಶಾದಿ ಖರಾಬ್ ಅಲ್ವಾ?'' ಸಮಯ ಸಿಕ್ಕರೆ ಸಾಕು, ಪೀರೊ ಭಾಯ್ಗೆ ಅವ್ರ ಕಾಲೆಳೆಯಕ್ಕೆ. ಕಪ್ಪಣ್ಣ ಪೀರ್ನ ಕೆಕ್ಕರ್ಸಿ ನೋಡುತ್ತಾ ಅಂದರು ''ಬಿಡಿ, ನೀವಾಗಿದ್ರೆ ವ್ಯಾಸರನ್ನ ವಾಲ್ಮೀಕೀಗೆ ಅಳಿಯನ್ ಬೇಕಾದ್ರೂ ಮಾಡ್ತಿದ್ದಿರಿ'' ಮಾತು ದಿಕ್ಕು ತಪ್ಪುತ್ತಿದ್ದನ್ನ ನೋಡಿ, ''ಮದುವೆಗೆ ಒಪ್ಪಕೊಳ್ಳೋಕೆ ಏನ್ ಮೋಡಿ ಮಾಡಿದ್ರಿ, ಸಾರ್''? ಚಂದ್ರು ಕೇಳಿದರು ಉತ್ಸಾಹದಿಂದ.

''ಏನಾಯ್ತಂದ್ರೆ, ಒಂದಿನ ಆ ಹುಡುಗಿ ಮನೆಗೆ – ಪ್ರೇಮಾ – ಆಕೆ ಹೆಸರು, ಒಬ್ಬ ಆಗುಂತಕ ಬಂದು ಬಾಗಿಲ ತಟ್ಟಿದರು. ಅಜ್ಜಿ ಬಂದು ಬಾಗಿಲು ತೆಗೀತು. ''ಯಾರು ಬೇಕು? ಮೇಲೆ ಬೆಲ್ಲಿದೆ, ಯಾಕೆ ಹಾಗೆ ಬಾಗಿಲು ತಟ್ತೀರಾ? ಯಾರ್ನೀವು'' ''ಹಿರೇಕೆರೂರು ಶ್ಯಾನುಭೋಗ ಶಂಕರಪ್ಪನವರ ಸಂಸಾರ ಈ ಮನೇಲಿದಾರೆ ಅಂತ ಈ ನಿಮ್ಮ ವಿಳಾಸ ಕೊಟ್ಟಿದ್ರು'' ಅರವತ್ತರ ಆಸುಪಾಸಿನಲ್ಲಿದ್ದ, ಜೀನ್ಸ್ ಪ್ಯಾಂಟ್‌ಧಾರಿಯ ಉತ್ತರ. ''ಅದ್ರಿಂದ ನಿಮ್ಗೇನಾಬೇಕು? ವಿಷಯಕ್ಕಬ್ನಿ.''

''ಏನಿಲ್ಲ ಶಂಕರಪ್ಪನವರ ಮಗ ಸುಬ್ರಾಮಯ್ಯ ನನ್ನ ಬಾಲ್ಯ ಸ್ನೇಹಿತ, ಒಟ್ಗೇ ಕಾಲೇಜ್ ಮುಗ್ಸಿ, ನಾನು ವಿದೇಶಕ್ಕೆ ಹೋಗಿ ಅಲ್ಲೇ ನೆಲ್ಸಿ ಬಿಟ್ಟೆ, ಈಗ ಐದಾರು ವರ್ಷಗಳಿಂದ ಇಲ್ಲೇ ಬಂದಿದೀನಿ, ನಂ ಸಂಸ್ಕೃತಿ ಬಿಡಕ್ಕಾಗುತ್ಯೆ? ಸುಬ್ಬು, ಅವ್ನ ಹೆಂಡ್ತಿ ಒಟ್ಗೇ ಬಹಳ ಹಿಂದೇನೆ ಹೋಗ್ಬಿಟ್ಟರು ಅಂತ ಗೊತ್ತಾಗಿ ನಂಗೆ ಬಹಳ ವ್ಯಸನವಾಯ್ತು, ನನ್ನ ಸ್ನೇಹಿತನ್ಗೆ ಮದುವೆ ವಯಸ್ಸಿನ ಮಗಳಿದಾಳೆ, ನೋಡಿ ನಿಮ್ಮಗನಿಗೆ ಆಗೋದಾದ್ರೆ'' ಅಂತ ಯಾರಿಂದಲೋ ಕೇಳಿ ಇಲ್ಲೀ ತಂಕಾ ಬಂದೆ. ನಂಗಿರೋದ್ ಒಬ್ಬನೇ ಮಗ, ಹೆಣ್ಮಕ್ಕಳಿಲ್ಲ,

ಸ್ನೇಹಿತನ ಋಣ ಹೀಗಾದ್ರೂ ತೀರ್ಸ್ಕೋಬೇಕಂತ. ಆಶೆ, ಮದುವೆ ಮಾಡಿ, ಕಾಶಿ ರಾಮೇಶ್ವರ ಹೀಗೆ ತೀರ್ಥಯಾತ್ರೆ ಮಾಡ್ಕೊಂಡು....''

''ಬನ್ನಿ, ಒಳಗೆ, ಇದೇ ಮನೆ, ನನ್ಮೊಮ್ಮಗಳು 'ಪ್ರೇಮಾ' ಅಂತಾ, ಮದುವೇಗೇನೋ ಇದಾಳೆ, ಆದ್ರೆ, ಸರಿಯಾದ ವರ ಸಿಗ್ತಾನೇ ಇಲ್ಲ. ಏನ್ಮಾಡೋದು ಇದ್ದೊಬ್ಬ ಮಗ, ಸೊಸೇನ ನಾ ಕಳ್ಕೊಂಡದ್ದಲ್ಲದೆ ಇವಳೂ ಅನಾಥೆ ಆಗೋದ್ ಬೇಡ ಅಂತ ನಾನೇ ಹೇಗೋ ನೋಡ್ಕಳ್ತಾ ಇದೀನಿ. ಇನ್ನ ವಿದೇಶದಲ್ಲಿರೋವ್ರು ನೀವು, ಹೇಗೋ ಏನೋ, ಆಚಾರ, ನಡವಳಿಕೆ, ಬಹಳಾನೆ ವ್ಯತ್ಯಾಸ ಇರತ್ತೆ''. ''ಅದೇನಿಲ್ಲ ಬಿಡಿ ಹುಡುಗ, ಹುಡುಗಿ ಒಪ್ಕಂಡ್ರೆ, ನಮ್ದೇನು ಇಲ್ಲ. ಜಾತಕ ಗೀತ್ಕ ಎಲ್ಲ ನಂಗೆ ಬೇಕಿಲ್ಲ, ಏನ್ ಓದಿದಾಳೆ ಹುಡುಗಿ?'', ''ಎಮ್‌ಬಿಎ ಕೊನೇ ವರ್ಷದಲ್ಲಿದಾಳೆ, ನೋಡಕ್ಕೆ ತಕ್ಮಟ್ಟಿಗಿದಾಳೆ, ಮನೆ ಕೆಲಸ, ಎಲ್ಲ ಕಲ್ತಿದಾಳೆ, ಇನ್ನ ಬಣ್ಣದ ಕುಸರಿ ಕೆಲಸ ಎಲ್ಲ ಹವ್ಯಾಸಾನೂ ಉಂಟು. ನಿಮ್ಮ ಹುಡುಗ...'', ''ಅವ್ನು ಅಮೆರಿಕಾದ ಪಿಟ್ಸ್‌ಬರ್ಗ್‌ನಲ್ಲೇ ಓದಿ, ಕೆಲ್ಸದಲ್ಲಿದಾನೆ, ಯಾವ ಕೆಟ್ಟ ಅಭ್ಯಾಸ ಇಲ್ಲ, ಇದೀಗ ಇಲ್ಲೇ ಬಂದು, ಅವನದೇ ಉದ್ಯೋಗಕ್ಕೆ ತಯಾರ್ನಲ್ಲಿದಾನೆ, ಸಿದ್ಧತೆ ನಡೆದಿದೆ. ನಿಂ ಕಂಡೀಷನ್ಗೆಲ್ಲ ನಮ್ಮೊಪ್ಪಿಗೆ ಇದೆ, ''ಏನೋಪ್ಪ ಒಂದೂ ನಂಗ್ತಿಳಿಯೊಲ್ಲ, ಸ್ವಲ್ಪ ಕಾಫಿ ತಗೊಂಡ್ ಕೂತಿರಿ, ಇನ್ನೇನ್ ಅವ್ಳು ಬರೋ ಸಮಯ''.

ಮತ್ತೆಲ್ಲಾ ಸುಸೂತ್ರವಾಗಿ ನಡೆದೋಯ್ತು. ಇಷ್ಟಪಟ್ಟವ್ನ ಪಡ್ಕೊಳ್ಳಾಗ್ದೆ ಹುಡುಗಿ ಅತ್ತು ಗೋಳಾಡಿದ್ದು ನಿಜ. ಆದ್ರೆ, ಅಜ್ಜಿ ಖಡಾಖಂಡಿತವಾಗಿ ಹೇಳಿದ್ದು ಬೇರೆ ಎಲ್ಲಿ ಹೋದ್ರು ತಾನು ಇಲ್ಲೇ ಸ್ವಂತ ಮನೇಲೆ ವಾಸ ಅಂತಾ ಕಂಡಿಷನ್ ಮಾಡಿದ್ದಲ್ಲದೆ, ಈ ಹುಡುಗ ಏನಾದ್ರೂ ಮದುವೆಗೆ ಮುಂಚೆ ಸರಿಯಾಗಿ ನಡ್ಕೊಳ್ದಿದ್ರೆ ಮಾತ್ರ, ಕಾನ್ಸಲ್ ಮಾಡಿ ಅವ್ಳಿಷ್ಟಪಟ್ಟ ಹುಡುಗ್ನ ಜೊತೆಗೆ ಮದುವೆ ಮಾಡೋಕ್ಕೆ ಸರಿ ಎಂದಿದ್ದು ಕಾರಣವಾಯ್ತು. ''ಹಾಗಾದ್ರೆ ಪಾಪ ಅಜ್ಜಿ ಬೇರೇನೆ?'' ಪ್ರೊ. ಹಂಚಿಕಡ್ಡಿ ಪ್ರಶ್ನಿಸಿದರು. ''ಹಾಗಾಗಕ್ಕೆ ಬಿಡಬಾರದಿತ್ತು ಸಾರ್'' ವ್ಯಾಕುಲದಿಂದ ಬಸವರಾಜಪ್ಪ ಬಡಬಡಿಸಿದರು. ಸಿದ್ಧಾಂತಿಗಳು ಗ್ಲಾಸಿನಿಂದ ಹೀರುತ್ತಾ ಎಲ್ಲರಕಡೆ ನೋಡಿ, ಮುಗುಳುನಗೆ ನಕ್ಕರು. ''ಅವಳಿಷ್ಟ ಪಟ್ಟ ನಮ್ಮ ಪ್ರಸಾದ್ನ ಜೊತೆಗೆ ಮದುವೆ ಆಯ್ತು''. ಒಂದು ಕ್ಷಣ ಗಂಭೀರವಾದ ಮೌನ ಎಲ್ಲೆಲ್ಲೂ. ನಂತರ ಎಲ್ಲ ಕಡೆಯಿಂದ್ಲೂ ಒಟ್ಟಿಗೇ ಚಪ್ಪಾಳೆ. ''ಲಾರ್ಡ್ ಟೆನ್ನಿಸನ್ ಕವಿ 'ಆಲ್ ಇಸ್ ವೆಲ್ ದಟ್ ಎಂಡ್ಸ್ ವೆಲ್' ಅಂತ ಎಲ್ಲೋ ಬರೆದಿದಾನಲ್ಲ ಆ ತರಹ, ಅಲ್ಲವೇ ಸಾರ್? ಅದ್ಹೇಗೆ ಸಾಧ್ಯ ಸಾರ್?'' ತೇಂಬೆ ಉವಾಚ. ''ಟೆನ್ನಿಸನ್ ಅಲ್ಲರೀ ಶೇಕ್ಸ್‌ಪಿಯರ್, ಸರಿಯಾಗಿ ಗೊತ್ತಿದ್ರೆ ಹೇಳಿ, ಇಲ್ಲ ಸುಮ್ನಿರಿ'' ಎಂದು ರೇಗಿದರು ಮತ್ತೊಬ್ಬರು. ಸಿದ್ಧಾಂತಿಗಳು ಮುಂದುವರೆಸಿದರು ''ಎಲ್ಲ ಆಮೇಲೆ ಸುಸೂತ್ರವಾಗಿ ಪ್ರೇಮಿಗಳ ಮದ್ವೆ ನಡೆದೋಯ್ತು ನಾ ಮೊದ್ಲೇ ಹೇಳ್ದಾಗೆ. ಈಗ ನಮ್ಮ ಪ್ರಸಾದ ಎರಡು ವರ್ಷದ ಮಗುವಿನ ತಂದೇ ಕೂಡ.'' ಇದೀಗ ಎಲ್ಲರ ಮುಖದಲ್ಲೂ ಪ್ರಶ್ನಾರ್ಥಕ ಚಿನ್ಹೆ ಎದ್ದು ಕಾಣ್ತಿತ್ತು, ಚಂದ್ರು ಸಿಟ್ಟಿನಿಂದ ಎದ್ದು ''ಇಂಪಾಸಿಬಲ್ ಮದ್ವೆ ಹ್ಯಾಗೆ ಪಾಸಿಬಲ್.. ಹೇಗೆ ಸಾಧ್ಯ ಸಾರ್? ಅಜ್ಜಿ ಏನಾದ್ರು ಆಗ್ಲೇ ಗೊಟಕ್ ಅಂತೇನಾದ್ರೂ....?'' ಅವ್ರ ಮಾತಿಗೆ ಅಲ್ಲೇ

ತುಂಡು ಹಾಕಿ ಸಿದ್ಧಾಂತಿಗಳು ಮುಂದುವರೆಸಿದರು ''ಛೀ, ಹಾಗೇನಿಲ್ಲ, ಮದ್ವೆ ಮಂಟಪದಲ್ಲಿ ವರಪೂಜೆ ದಿವ್ಸ ಬೀಗರ ದಿಬ್ಬಣ ಬರೋದನ್ನೇ ಕಾಯ್ತಿದ್ದಾಗ ಇದ್ದಕಿದ್ದಂತೆ ಬರ್ಸಿಡಿಲಿನಂಥಹ ಸುದ್ದಿ ಬಂತು. ಹುಡುಗ, ಅವ್ನ ತಂದೆ ಇಬ್ಬರೂ ಕಳ್ಳ ಖದೀಮರಂತೆ, ಎಲ್ಲರ ಬಳಿ ಹಣ ವಸೂಲಿ ಮಾಡಿ, ಮದ್ವೆಗೆ ಒಪ್ಪಿಕೊಂಡು ಪತ್ತೆ ಇಲ್ದೆ ಮಾಯ್ವಾಗ್ತಿದ್ರಂತೆ. ಆದ್ರೆ ಈ ಸಲ ಪೋಲಿಸ್ನವ್ರ ಕೈಗೆ ಸಿಕ್ಕಿ, ಕಂಬಿ ಎಣ್ಸಕ್ಕೆ ಸಿದ್ಧ, ಮದ್ವೇಗಲ್ಲ ಅಂತ ವಾರ್ತೆ. ಅಲ್ದೆ ಹಿಂದಿನ ದಿನ ಅಲ್ಲಿಗೇ ಇಬ್ಬರು ಪೇದೆಗಳು ಬಂದು ಈ ಮದುವೆ ಬಗ್ಗೆ ಅಲ್ಲಿದ್ದವರನ್ನು ವಿಚಾರಿಸ್ಕೊಂಡು ಹೋಗಿದ್ದರು. ಹಾಗಾಗಿ ನಾವೆಲ್ಲಾ ಅಜ್ಜಿಗೆ ಬುದ್ಧಿ ಹೇಳಿ, ತಡ ಮಾಡದೆ ಪ್ರಸಾದನ ಮದ್ವೆ ಅದೇ ಮಂಟಪ್ದಲ್ಲಿ ನಡೆದು ಮುಗ್ದಿದಿವಿ ಸುಖಾಂತ್ಯವಾಗಿ'' ಎಂದು ಹೇಳುತ್ತ ತಮ್ಮ ಆಸನದಿಂದೆದ್ದರು. ಎಲ್ಲೆಲ್ಲೂ ನಿಶ್ಶಬ್ದ, ಸದಸ್ಯರೂ ಕೂಡ ಒಬ್ಬೊಬ್ಬರೇ ತಮ್ಮ ಆಸೀನಗಳನ್ನು ಬಿಟ್ಟು ಮನೆಯ ಕಡೆ ಹೊರಡುವ ತಯಾರಿ. ವಿಚಿತ್ರವೆಂದರೆ ಈ ಬಂಧನದ ಸುದ್ಧಿ ಮಾರನೇ ದಿನದ ಯಾವ ಪತ್ರಿಕೆಯಲ್ಲೂ, ಟೀವೀಗಳಲ್ಲೂ ಕಾಣಿಸಿಕೊಳ್ಳಲಿಲ್ಲ! ಅಮೆರಿಕ ಮಾವನ ವೇಷದಲ್ಲಿ ಮತ್ತು ಪೇದೆಗಳು ಬಂದಿದ್ದವರು ಯಾರು ಎಂಬುದು ಜಿಜ್ಞಾಸೆಯಾಗೇ ನಿಂತುಬಿಟ್ಟಿತು! ಸದಸ್ಯರುಗಳು ಮಾತ್ರ ತಮ್ಮತಮ್ಮಲ್ಲೇ ಚರ್ಚಿಸುತ್ತಾ ಇದರಲ್ಲಿ ಶಂಕರರ ಕೈವಾಡವೇ ಖಂಡಿತ ಇರಬೇಕೆಂದುಕೊಂಡಿದ್ದು ಈ ವರದಿಗಾರನ ಕಿವಿಗೂ ಬಿದ್ದಿದ್ದು ನಿಜ. ಸಾಕ್ಷ್ಯಗಳು ಇಲ್ಲದಿದ್ದರೂ!

☆

---

## ದೇವರ ದಯೆ

ಎಲೈ ಮಡೆಯಾ, ದೇವರು ಪ್ರತ್ಯಕ್ಷ ಕಾಣಿಸದಿದ್ದರೂ ಪರೋಕ್ಷವಾಗಿ ಆತನ ಮಹಿಮೆಯ ಅರಿವು ನಾನಗೆ ಆಗುತ್ತಿಲ್ಲವೇ?

ಉದಾಹರಣೆಗಳೊಡನೆ ತಿಳಿಸಿ ಗುರುವೇ

ತಟ್ಟೆ ಹಿಡಿದು ರಸ್ತೆಯಲ್ಲಿ ತಿರುಗಿದರೆ ಯಾರಾದರೂ ಕಾಸು ಹಾಕುತ್ತಾರೆಯೇ?

ಭಿಕ್ಷೆಗೆ ಹೋದರೆ ಬೆಗ್ಗರ್ಸ್ ಕಾಲೋನಿಗೆ ಹಾಕ್ತಾರೆ.

ಅದೇ ತಟ್ಟೆಯಲ್ಲಿ ಕರ್ಪೂರ ಗುಪ್ಪೆ ಇಟ್ಟು ದೇವರಿಗೆ ಆರತಿ ಎತ್ತಿ ಎಲ್ಲಾರ ಮುಂದೂ ಹಿಡಿ ಆಗ ತಟ್ಟೆಗೆ ಯಥಾ ಶಕ್ತಿ ಕಾಸು ಹಾಕುತ್ತಾರೆ.

ಹೌದೋ ಅಲ್ವೋ . ಅದೇ ದುಡ್ಡಿನಿಂದಲೇ ನಮ್ಮ ಮಠದಲ್ಲಿ ರಾಗಿ ಅಂಬಲಿ, ನುಚ್ಚಿನುಂಡೆ, ಅಕ್ಕಿ ತರಿ ಉಪ್ಪಿಟ್ಟು ಮಾಡಿಸಿ ನಿಮ್ಮನ್ನೆಲ್ಲಾ ಕೊಬ್ಬಿಸಿ ದೇವರೇ ಇಲ್ಲಾಂತ ಅನ್ನೋ ಬುದ್ಧಿ ಬೆಳೆಯೋ ಹಾಗೆ ಮಾಡಿರೋದು.

ಹೌದು ಗುರುವೇ

ಅಂದ ಮೇಲೆ ದೇವರು ಎಂದರೆ ಯಾರು?

ಆರತಿ ತಟ್ಟೆ ಕಾಸು

ಈಗಲಾದರೂ ಒಪ್ಕೊತೀಯ ದೇವರ ದಯೆ ಇಲ್ದೆ ಇದ್ರೆ ನಾವು ಉಪವಾಸ ಸಾಯ್ತೀವೀಂತ

ಒಂದು ರೀತಿ ನಿಮ್ಮ ಮಾತು ನಿಜ ಗುರುವೇ

*(ದಾಶರಥಿ ದೀಕ್ಷಿತರ ಆಯ್ದ ನಗೆಬರಹಗಳು – ದೇವರಿಲ್ಲದ ಗುಡಿಯು)*

# ಅಪರಂಜಿಗೆ ಹಾರ್ದಿಕ ಶುಭಾಶಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ವಸ್ತ್ರ ಮುಚ್ಚಿದ ಗುರುತು!

- ಎಂ.ಕೆ. ಭಾಸ್ಕರ ರಾವ್

**ಬೆಂ**ಗಳೂರು ನಗರದ ಆಯಕಟ್ಟಿನ ಪ್ರದೇಶದಲ್ಲಿದ್ದ ಆ ಸ್ಟುಡಿಯೋ ಚಲನಚಿತ್ರ ನಿರ್ಮಾಣದ ಎಲ್ಲ ಕವಲುಗಳಿಗೂ ಹೇಳಿ ಮಾಡಿಸಿದಂತಿತ್ತು. ಇದ್ದ ಮೂರು ಫ್ಲೋರುಗಳಲ್ಲಿ ಸೆಟ್ ಹಾಕಬಹುದಾಗಿತ್ತು. ರೆಕಾರ್ಡಿಂಗ್, ರೀರೆಕಾರ್ಡಿಂಗ್, ಡಬ್ಬಿಂಗ್, ಎಡಿಟಿಂಗ್‌ಗೆ ಸೌಕರ್ಯವಿತ್ತು. ಐಷಾರಾಮಿ ಕಾರುಗಳನ್ನು ಪಾರ್ಕ್ ಮಾಡಲು ಆವರಣದ ಒಳಗೇ ವಿಶಾಲ ಸ್ಥಳಾವಕಾಶವಿತ್ತು. ''ಒಂದೇ ಜಾಗದಲ್ಲಿ ಎಲ್ಲ ಕೆಲಸ ಮುಗಿಸಿಕೊಳ್ಳುವ ಸಲುವಾಗಿ'' ಸ್ಟುಡಿಯೋದ ಮುಂದೆ ನಿರ್ಮಾಪಕರು ಸಾಲುಗಟ್ಟುತ್ತಿದ್ದರು. ಆ ಕಾಲದ ಬಹುತೇಕ ನಾಯಕರ ಪ್ರತಿಷ್ಠೆಯ ಚಿತ್ರಗಳ ಚಿತ್ರೀಕರಣ ಮತ್ತಿತರ ಕೆಲಸ ಕಾರ್ಯ ಅಲ್ಲಿ ನಡೆಯುತ್ತಿತ್ತು. ಇನ್ನು ಕೆಲವು ನಾಯಕ ನಟ-ನಟಿಯರ ಸ್ವಪ್ರತಿಷ್ಠೆಯ ತಾಣವೂ ಅದಾಗಿ ಹೆಸರು ಮಾಡಿತ್ತು.

**ಮೈತುಂಬ ಬಟ್ಟೆ ಹಾಕಿಕೊಂಡಿದ್ದರಿಂದ ಆಕೆ ಗುರುತೇ ಸಿಗಲಿಲ್ಲ!**

ಕನ್ನಡ ಚಿತ್ರಗಳು ಆರಂಭದ ಕೆಲವು ದಶಕಕಾಲ ಮದ್ರಾಸಿನಲ್ಲಿದ್ದ ಸ್ಟುಡಿಯೋಗಳ ಪರಾವಲಂಬಿಗಳಾಗಿದ್ದವು. ಹಗಲು ಹೊತ್ತು ಆ ಸ್ಟುಡಿಯೋಗಳಲ್ಲಿ ತಮಿಳು, ತೆಲುಗು, ಆಗೀಗ ಮಲಯಾಳಂ ಚಿತ್ರಗಳ ಶೂಟಿಂಗ್ ನಡೆಯುತ್ತಿತ್ತು. ಕನ್ನಡ ಚಿತ್ರಗಳ ಚಿತ್ರೀಕರಣವೇನಿದ್ದರೂ ರಾತ್ರಿ ಒಂಭತ್ತರ ಬಳಿಕ. ಅದೇ ಸ್ಟುಡಿಯೋಗಳಲ್ಲಿ ಅರ್ಧ ಬಾಡಿಗೆ ನೀಡಿ ಕನ್ನಡ ಚಿತ್ರ ಚಿತ್ರೀಕರಿಸುತ್ತಿದ್ದರು. ಕನ್ನಡಿಗರ ಈ ದರಿದ್ರಾವಸ್ಥೆಯನ್ನು ಕಂಡ ತಮಿಳು ಧನವಂತರೊಬ್ಬರು ಬೆಂಗಳೂರಿನಲ್ಲಿ ಹಾಕಿದ ಸ್ಟುಡಿಯೋ ಇದಾಗಿದ್ದರಿಂದ ಆಗಾಗ ತಮಿಳು ಚಿತ್ರಗಳ ಚಿತ್ರೀಕರಣವೂ ನಡೆಯುತ್ತಿತ್ತು.

ಹೀಗೆ ಹೋಗಿ ಹಾಗೆ ಬರಬಹುದಾದಷ್ಟು ಸಮೀಪದಲ್ಲೇ ಸ್ಟುಡಿಯೋ ಇದ್ದ ಕಾರಣ, ಸಿನಿಮಾ ಪತ್ರಕರ್ತರು ಪದೇ ಪದೇ ಹೋಗಿ ಚಿತ್ರೀಕರಣಕ್ಕೆ ಸಾಕ್ಷಿಯಾಗುತ್ತಿದ್ದರು. ನಟ ನಟಿಯರ ಸಂದರ್ಶನ ನಡೆಸುತ್ತಿದ್ದರು. ಸಿನಿಮಾಗಳ ಪ್ರತ್ಯಕ್ಷದರ್ಶಿ ವರದಿಯನ್ನು ಮಾಡುತ್ತಿದ್ದರು. ಇದು ಅಂಥ ಒಂದು ಸಂದರ್ಭ ಸನ್ನಿವೇಶದ ವರದಿ.

ಪಂಚತಾರಾ ಹೋಟೆಲಿನಲ್ಲಿ ಇರುವಂಥ ಕ್ಲಬ್‌ನ ಸೆಟ್ ಅದು. ಸುತ್ತಮುತ್ತ ಮೇಲೆ ಕೆಳಗೆ ಸಂಪೂರ್ಣ ಝಗಮಗ. ಕಣ್ಣುಕೋರೈಸುವ ಬಣ್ಣಬಣ್ಣದ ಬೆಳಕು. ಮಧ್ಯದಲ್ಲಿ ಸಾಲಂಕೃತ ಪುಟ್ಟ ವೇದಿಕೆ. ಸುತ್ತಮುತ್ತ ಸಹಕಲಾವಿದೆಯರು ನೃತ್ಯ ನಿರ್ದೇಶಕ ನೀಡಲಿದ್ದ ರೋಲ್ ಕ್ಯಾಮೆರಾ, ಆಕ್ಷನ್ ಸೂಚನೆಗೆ ಕಾದು ನಿಂತಿದ್ದರು. ತೊಟ್ಟಿಲಿನಂಥ ಬುಟ್ಟಿ ವೇದಿಕೆಯ ಮೇಲೆ ನೇತಾಡುತ್ತಿತ್ತು. ಬುಟ್ಟಿಯಲ್ಲಿ ಸರ್ವಾಲಂಕಾರಭೂಷಿತ ಸುಂದರಿ ಆಗಲೇ ಕೂತಾಗಿತ್ತು. ಆಕೆಯೂ ನಿರ್ದೇಶಕರ ಕೊನೆ ಕ್ಷಣದ ಆಣತಿಗೆ ಕಾಯುತ್ತಿದ್ದಿರಬೇಕು. ಫ್ಲೋರು ಒಳಗೆ

ನಿಂತಿದ್ದ/ಕೂತಿದ್ದ ಪತ್ರಕರ್ತರಿಗೂ ಸೇರಿದಂತೆ ಯಾರಿಗೂ ಆಕೆ ಕಾಣಿಸುತ್ತಿರಲಿಲ್ಲ. ಈ ಕಡೆ ಕ್ರೇನ್‌ನಲ್ಲಿ ಕ್ಯಾಮೆರಾ ಜೊತೆ ಕೂತಿದ್ದ ಕ್ಯಾಮರಾಮನ್ ನಿರ್ದೇಶಕರ ಆದೇಶಕ್ಕೆ ಕಾಯುತ್ತಿದ್ದ.

ಆ ದಿನ ಆ ಮೋಹಕ ನಟಿಯ ಕ್ಯಾಬರೆ ನರ್ತನದ ಚಿತ್ರೀಕರಣವಿದೆಯೆಂದೂ, ನಂತರದಲ್ಲಿ ನಿರ್ದೇಶಕರ ಪತ್ರಿಕಾಗೋಷ್ಠಿಯುಂಟೆಂದೂ, ಅದಾದ ಬಳಿಕ ಭೋಜನದ ವ್ಯವಸ್ಥೆಯಾಗಿದೆ ಎಂದೂ ಮಾಹಿತಿ ಇದ್ದ ಕಾರಣ, ಅಲ್ಲಿದ್ದ ಪತ್ರಕರ್ತರಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಆಸಕ್ತಿ, ಕುತೂಹಲ ಮನೆ ಮಾಡಿತ್ತು. ಸಿನಿಮಾ ಪಿಆರ್‌ಓ ನಟಿಯ ಹೆಸರನ್ನು ಗುಟ್ಟಾಗಿಟ್ಟು ಒಳ ಕುತೂಹಲ ಇನ್ನಷ್ಟು ಹೆಚ್ಚುವಂತೆ ಮಾಡಿದ್ದ. ಹದಿಹರೆಯದ ಯುವಕರ ನಿದ್ರೆಯನ್ನು ಹಾಳು ಮಾಡಿದ ನಟಿ ಆಕೆ ಎಂಬ ವಿಶೇಷಣವೂ ಆ ಹೊತ್ತಿಗೆಲ್ಲ ಪ್ರಚಾರ ಪಡೆದುಕೊಂಡಿತ್ತು.

ಸನ್ನಿವೇಶದ ಶಾಟ್‌ಗೆ ಎಲ್ಲ ಸಿದ್ಧತೆಯಾಗಿತ್ತು. ಸಹ ನಿರ್ದೇಶಕನೊಬ್ಬ ಆಲ್ ಲೈಟ್ಸ್ ಎಂದು ಕೂಗಿದ. ಅಣೆಕಟ್ಟು ಒಡೆದು ನೀರು ಭೋರ್ಗರೆಯುತ್ತ ಹೊರಕ್ಕೆ ಬಂದಂತೆ, ಸಾವಿರಾರು ವ್ಯಾಟ್ ಬೆಳಕು ವೇದಿಕೆಯ ಮೇಲೆ, ಸುತ್ತಮುತ್ತ ಚೆಲ್ಲಿತು. ಸ್ಟಾರ್ಟ್ ಕ್ಯಾಮೆರಾ... ರೋಲ್ ಆನ್.... ಆಕ್ಷನ್ ಎಂದು ಡೈರೆಕ್ಟರ್ ಮಹಾಶಯ ಕಾರ್ಡ್‌ಲೆಸ್ ಮೈಕ್ ಹಿಡಿದು ಆದೇಶ ನೀಡಿದ್ದೇ ತಡ. ಒಂದು ಕಡೆಯಿಂದ ಭರ್ಜರಿ ವಾದ್ಯ ಸಂಗೀತ ಹೊತ್ತ ಹಾಡಿನ ಅಲೆ ತೇಲಿ ಬಂತು. ತಾವು ಧರಿಸಿದ್ದ ತುಂಡುಡುಗೆಯ ಮೇಲೆ ಅವರ ಇವರ ದೃಷ್ಟಿ ಬೀಳಬಾರದೆಂದು ಮುಚ್ಚಿಕೊಂಡಿದ್ದ ಟವೆಲ್, ವೇಲ್ ಮುಂತಾದ ವಸ್ತ್ರವನ್ನು ಸಹನಟಿಯರು ಪಕ್ಕದಲ್ಲಿಟ್ಟು ಸೊಂಟ, ನಿತಂಬವೂ ಸೇರಿದಂತೆ ಮಾಂಸಲವನ್ನೆಲ್ಲ ತಕತಕ ಕುಣಿಸುತ್ತ ಕ್ರೇನ್ ಮೇಲಿನಿಂದ ಚಿತ್ರೀಕರಿಸುತ್ತಿದ್ದ ಕ್ಯಾಮೆರಾ ಮುಂದೆ ಹಾಯುವ ಹಾರುವ ಸರ್ಕಸ್ ಶುರು ಮಾಡಿದರು.

ಅದೇ ಕಾಲಕ್ಕೆ ಮೇಲಿನಿಂದ ಸಾಲಂಕೃತ ಬುಟ್ಟಿ ನಿಧಾನವಾಗಿ ವೇದಿಕೆಯತ್ತ ಇಳಿಯಲಾರಂಭವಾಯಿತು. ಕ್ಯಾಮೆರಾ ಅಲ್ಲೇ ನಿಂತಂತೆ ಆಯಿತು. ನಟಿ ಕ್ಲಬ್‌ನಲ್ಲಿ ಗುಂಡು ಹಾಕುತ್ತ ಕುಳಿತ ರಸಿಕ ಮಹಾಶಯರಿಗೆ ಕೈಬೀಸಿ ಬುಟ್ಟಿಯಿಂದ ಹೊರಕ್ಕೆ ನವಿರು ಪಾದವನ್ನಿಟ್ಟು ಬರುವ ಸನ್ನಿವೇಶವನ್ನು ಛಾಯಾಗ್ರಾಹಕರು ಚಿತ್ರೀಕರಿಸಿದರು. ನೃತ್ಯ ನಿರ್ದೇಶಕ ತಲೆ ಅಲ್ಲಾಡಿಸಿದ. ಕಟ್ ಎಂದ ನಿರ್ದೇಶಕರು ಶಾಟ್ ಒಕೆ ಎಂದರು.

ಬುಟ್ಟಿಯಿಂದ ಹೊರಬಿದ್ದ ನರ್ತಕಿ ವೇದಿಕೆ ಅಂಚಿಗೆ ಬಂದು ಮತ್ತೆ ವೀಕ್ಷಕರತ್ತ ಕೈ ಬೀಸಿ, ಫ್ಲೈಯಿಂಗ್ ಕಿಸ್ ಹಾರಿಸುವ ಸನ್ನಿವೇಶ. ಡಾನ್ಸರ್ ಹಾಗೇ ನಡೆದರೆ ಅದರಲ್ಲಿ ಏನು ವಿಶೇಷ...? ಭೋರ್ಗರೆಯುವ ಸದ್ದಿಗೆ (ಸಿನಿಮಾದಲ್ಲಿ ಅದನ್ನು ಸಂಗೀತ ಎನ್ನುತ್ತಾರೆ) ನಡು ಬಳುಕಿಸುತ್ತ ಕೊರಳು ಕೊಂಕಿಸುತ್ತ ಹೆಜ್ಜೆಗಳನ್ನಿಟ್ಟ ಆಕೆ ಹಾಗೇ ಒಂದು ಸುತ್ತು ಹೊಡೆದು ನಿರ್ಗಮಿಸಿದಳು. ನಿರ್ದೇಶಕರು ಕಟ್ ಎಂದರು. ಶಾಟ್ ಒಕೆ ಎಂದು ಶಿಫಾರಸು ಮಾಡಿದರು. ಲಂಚ್ ಬ್ರೇಕ್ ಎಂದರು. ಸಹಾಯಕ ನಿರ್ದೇಶಕ ಆಲ್ ಲೈಟ್ಸ್ ಆಫ್ ಎಂದು ಕೂಗಿದ. ಸೂರ್ಯ ಏಕದಂ ಕಣ್ಮುಚ್ಚಿಕೊಂಡಂತೆ ಕತ್ತಲು ಆವರಿಸಿತು. ಮಿಣುಕು ಬೆಳಕು ಆವರಿಸಿತು.

ಗರ್‌ರ್ ಎಂದು ಗುರುಗುಡುತ್ತಿದ್ದ ಕ್ಯಾಮೆರಾ ಸದ್ದಡಗಿತು. ಅದನ್ನು ಹೊತ್ತಿದ್ದ ಕ್ರೇನ್ ಹಾಗೇ ನೆಲಕ್ಕೆ ಬಂದು ಕ್ಯಾಮರಾಮನ್ ಇಳಿದ.

ನಿರ್ದೇಶಕರು ಫ್ರೀ ಆದರು, ಚಿತ್ರೀಕರಣದ ಮೂಡ್‌ನಿಂದ ಹೊರಕ್ಕೆ ಬಂದಿದ್ದ ಅವರು ಮಾತನ್ನಾಡುವ ಮೂಡಿಗೆ ಹೊರಳಿಕೊಂಡಿದ್ದರು. ನಿರ್ದೇಶಕ ಸಿಕ್ಕಿದ್ದೇ ತಡ, ಪತ್ರಕರ್ತರು ಅಮರಿಕೊಂಡರು. ಯಾರು ಆ ನಟಿ ಅವರನ್ನು ಕರೆಸಿ ಎಂದು ದುಂಬಾಲು ಬಿದ್ದರು. ಬರ್ತಾರೆ, ಲಂಚ್‌ಗೆ ಜಾಯ್ನ್ ಆಗ್ತಾರೆ ಎಂದ ನಿರ್ದೇಶಕರು ಯಾರು ಆ ನಟಿ ಎಂದು ಕೇಳಿದವರಿಗೆ ನೀವೇ ಹೇಳಿ ನೋಡೋಣ ಎಂದು ಕಿಚಾಯಿಸಿದರು. ಯಾವೊಬ್ಬ ಪತ್ರಕರ್ತರಿಗೂ ಆಕೆಯ ಗುರುತು ಇದ್ದಂತೆ ಕಾಣಿಸಲಿಲ್ಲ.

ನೀವು ಹೇಳ್ರೀ ನೀವು ಹೇಳ್ರೀ ಎಂದು ನಿರ್ದೇಶಕರು ಕದಳೀವನದಲ್ಲಿ ಅಕ್ಕ ಮಹಾದೇವಿ ಅಲವತ್ತುಕೊಂಡಂತೆ ಕೇಳಿಯೇ ಕೇಳಿದರು. ಊಹೂಂ ಯಾರಿಗೂ ಆ ನಟೀಮಣಿಯ ಪತ್ತೆ ಹಚ್ಚಲಿಲ್ಲ. ಈಕಿ ಹೊಸಬಾಕಿ ಅಲ್ರೀ, ತಮಿಳು, ತೆಲುಗು ಹ್ಯಾಂಗೋ ಹಾಂಗೆ ಕನ್ನಡದಾಗೂ ಆಕ್ಟ್ ಮಾಡಿದ್ದಾರೆಂದು ನಿರ್ದೇಶಕ ಹೇಳಿದಾಗಲೂ ಪ್ರಯೋಜನವಾಗಲಿಲ್ಲ. ಆ ಪ್ರಶ್ನೆ ಕ್ವಿಜ್‌ನಂತೆ ಕೇಳಿ ಬಂತೇ ಹೊರತೂ ಯಾರಿಗೂ ಎಷ್ಟೂ ಪಾಯಿಂಟ್ಸ್ ಬರಲಿಲ್ಲ. ಅತ್ತ ಕಡೆಯಿಂದ ಆ ನಟಿ ಪತ್ರಿಕಾಗೋಷ್ಠಿ ನಡೆಯುತ್ತಿದ್ದ ಜಾಗದ ಕಡೆಗೇ ಬರುತ್ತಿದ್ದುದನ್ನು ಗಮನಿಸಿದ ನಿರ್ದೇಶಕ ನಟಿಯ ಹೆಸರನ್ನು ತಾನೇ ಹೇಳಿದ. ಅಯ್, ಇವರು ಮೈತುಂಬ ಬಟ್ಟೆ ಹಾಕಿಕೊಂಡಿದ್ದಾರಲ್ಲ ಹಾಗಾಗಿ ನಮಗ್ಯಾರಿಗೂ ಆಕೆಯ ಪರಿಚಯ ಹತ್ತಲಿಲ್ಲ ಎಂದು ಮೂರ್ನಾಲ್ಕು ಜರ್ನಲಿಸ್ಟ್‌ಗಳು ಒಮ್ಮೆಗೇ ಹೇಳಿದರು. ಮಧ್ಯಾಹ್ನಾ ನಂತರದ ಚಿತ್ರೀಕರಣದ ಸಮಯದಲ್ಲಿ ಆಕೆ ತಾನು ಧರಿಸಿದ್ದ ವಸ್ತ್ರವನ್ನು ಒಂದೊಂದಾಗಿ ಕಳಚುವ ಸನ್ನಿವೇಶವಿತ್ತು. ಹೆಸರು ಗೊತ್ತಾದ ನಂತರ ಜರ್ನಲಿಸ್ಟರ ಆಸಕ್ತಿ ಕುತೂಹಲವೆರಡೂ ಕರಗಿ ಹೋಗಿತ್ತು.

☆

### ನಟಿ ಎಂದರೆ

ಆಕೆ ಕುಡಿಯಲೇಬೇಕಿಲ್ಲ ಟೀ
ಆಗಿರಲೇಬೇಕಿಲ್ಲ ನಾಟೀ
ಇದ್ದರೆ ಪರವಾಗಿಲ್ಲ ಚೂಟೀ
ಯಾರೂ ಹುಡುಕುವುದಿಲ್ಲ ಬ್ಯೂಟಿ
ಒಬ್ಬೊಬ್ಬರು ಅನ್ನಬಹುದು ಕ್ಯೂಟಿ
ಎಲ್ಲೋ ಕೆಲವು ಮರೆತಾರು ಡ್ಯೂಟಿ
ಏನೇ ಆಗಿರಲಿ
ಏನೇ ಆಗಿಲ್ಲದೇ ಇರಲಿ
ಆಕೆ ನಿಜಕ್ಕೂ ಆಗಿದ್ದರೆ ಚೆನ್ನ
ಸಿಂಹಕಟಿ

## STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2016 **M. ShivaKumar**

Bangalore (Signature of the Publisher)